| ವಿಷಯ | ತರಗತಿ 1 | ತರಗತಿ 2 | ತರಗತಿ 3 | ತರಗತಿ 4 |
|---|---|---|---|---|
| | ಕುಟುಂಬದೊಂದಿಗೆ ಸಂಬಂಧ | ಕುಟುಂಬಗಳಲ್ಲಿರುವ ವೈವಿಧ್ಯ | ತಲೆಮಾರಿನ ಕಲ್ಪನೆ<br>ಸರಳ ವಂಶವೃಕ್ಷದ ಕಲ್ಪನೆ | ಕುಟುಂಬ ವ್ಯವಸ್ಥೆಯಲ್ಲಿನ ಬದಲಾವಣೆ |
| | ➢ **ಕುಟುಂಬದೊಂದಿಗೆ ಇರುವ ಸಂಬಂಧವನ್ನು ಅರಿಯುವರು.**<br><br>• ತನ್ನ ಕುಟುಂಬದ ಪರಿಚಯ ಮಾಡಿಕೊಡುವರು.<br><br>• ತನ್ನ ಕುಟುಂಬದ ಸದಸ್ಯರ ನಡುವಿನ ಸಂಬಂಧಗಳ ಪರಿಚಯ ಮಾಡಿಕೊಡುವರು. | ➢ **ಕುಟುಂಬದಲ್ಲಿರುವ ವೈವಿಧ್ಯತೆಯನ್ನು ಗುರುತಿಸುವರು.**<br><br>• ಬೇರೆಯವರ (ಸ್ನೇಹಿತರ, ನೆರೆಹೊರೆಯವರ) ಕುಟುಂಬ ಪರಿಚಯ ಮಾಡಿಕೊಡುವರು.<br><br>• ತನ್ನ ಕುಟುಂಬ ಮತ್ತು ಬೇರೆಯವರ ಕುಟುಂಬವನ್ನು ಹೋಲಿಸುವರು.<br><br>• ಚಿಕ್ಕ ಮತ್ತು ದೊಡ್ಡ ಕುಟುಂಬಗಳ ವ್ಯತ್ಯಾಸ ತಿಳಿಸುವರು. | ➢ **ಮೂರು ತಲೆಮಾರುಗಳ ಸದಸ್ಯರ ಸಂಬಂಧಗಳನ್ನು ಅರಿಯುವರು.**<br><br>• ತಲೆಮಾರಿನ ಕಲ್ಪನೆ ತಿಳಿಸುವರು.<br><br>• ಮೂರು ತಲೆಮಾರುಗಳ ಸದಸ್ಯರ ಪರಿಚಯ ಮಾಡಿಕೊಡುವರು.<br><br>• ಮೂರು ತಲೆಮಾರುಗಳ ಸದಸ್ಯರಿಗೆ ಮತ್ತು ತನಗೂ ಇರುವ ಸಂಬಂಧವನ್ನು ಪರಿಚಯ ಮಾಡಿಕೊಡುವರು. | ➢ **ಜನರು ಒಟ್ಟಿಗೆ ವಾಸಿಸುವ ವ್ಯವಸ್ಥೆಯಲ್ಲಿ ಕಾಲಕ್ರಮೇಣ ಆದ ಬದಲಾವಣೆಯನ್ನು ಗುರುತಿಸುವರು.**<br><br>• ತನಗೆ ತಿಳಿದಿರುವ ದೊಡ್ಡ ಮತ್ತು ಚಿಕ್ಕ ಕುಟುಂಬದ ಪರಿಚಯ ಮಾಡಿಕೊಡುವರು.<br><br>• ಉದಾಹರಣೆಗಳ ಮೂಲಕ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳ ಲಕ್ಷಣಗಳನ್ನು ವಿವರಿಸುವರು.<br><br>• ತನ್ನ ಮೂರು ತಲೆಮಾರುಗಳ ಕುಟುಂಬದ ಸದಸ್ಯರ (ಗಾತ್ರ) ಸಂಖ್ಯೆಗಳನ್ನು ಹೋಲಿಸುವರು.<br><br>• ತನ್ನ ಮೂರು ತಲೆಮಾರುಗಳ ಕುಟುಂಬದಲ್ಲಿ ಸೇರ್ಪಡೆಯಾದ ಮತ್ತು ಬಿಟ್ಟು ಹೋದ ಸದಸ್ಯರ ಬಗ್ಗೆ ದಾಖಲಿಸುವರು.<br><br>• ಇದನ್ನು ಸರಳ ವಂಶ ವೃಕ್ಷದಲ್ಲಿ ವ್ಯಕ್ತಪಡಿಸುವರು. |
| | | | | |

| | | | |
|---|---|---|---|
| | | ➢ **ಮೂರು ತಲೆಮಾರುಗಳ ಸರಳ ವಂಶವೃಕ್ಷ ರಚಿಸುವರು.**<br><br>• ಮೂರು ತಲೆಮಾರುಗಳ ಸದಸ್ಯರ ಪರಿಚಯುವನ್ನು ಸರಳ ವಂಶವೃಕ್ಷದ ಮೂಲಕ ವ್ಯಕ್ತಪಡಿಸುವರು. | ➢ **ಮೂರು ತಲೆಮಾರುಗಳಲ್ಲಿ ಕುಟುಂಬದ ಸದಸ್ಯರಲ್ಲಿ ಆದ ಬದಲಾವಣೆಯನ್ನು ಸರಳ ವಂಶವೃಕ್ಷದಲ್ಲಿ ದಾಖಲಿಸುವರು.**<br><br>• ತನ್ನ ಮೂರು ತಲೆಮಾರುಗಳ ಕುಟುಂಬದಲ್ಲಿ ಸೇರ್ಪಡೆಯಾದ ಮತ್ತು ಬಿಟ್ಟುಹೋದ ಸದಸ್ಯರ ಬಗ್ಗೆ ದಾಖಲಿಸುವರು.<br>• ಇದನ್ನು ಸರಳ ವಂಶ ವೃಕ್ಷದಲ್ಲಿ ವ್ಯಕ್ತಪಡಿಸುವರು. |
| ➢ **ಮನೆ ಕೆಲಸದಲ್ಲಿ ಇರುವ ಪರಸ್ಪರ ಸಹಕಾರವನ್ನು ಅರಿಯುವರು.**<br><br>• ದಿನ ನತ್ಯ ಮನೆಯಲ್ಲಿ ನಡೆಯುವ ಕೆಲಸಗಳನ್ನು ಹೇಳುವರು.<br>• ಈ ಕೆಲಸಗಳನ್ನು ಯಾರು ಯಾರು ಮಾಡುವರು ಎಂದು ಗುರುತಿಸುವರು.<br>• ಒಬ್ಬರೇ ಮಾಡುವ ಕೆಲಸವನ್ನು ಮತ್ತು ಹೆಚ್ಚು ಜನರು ಸೇರಿ ಮಾಡುವ ಕೆಲಸಗಳಲ್ಲಿ ಒಂದನ್ನು ಉದಾಹರಿಸುವರು.<br>• ಕೆಲವು ಕೆಲಸಗಳಿಗೆ ಒಬ್ಬರಿಗಿಂತ ಹೆಚ್ಚು ಜನರು ಅಗತ್ಯ ಎಂಬುದನ್ನು ವ್ಯಕ್ತಪಡಿಸುವರು. | ➢ **ಕುಟುಂಬ ಒಂದು ಆಧಾರ ವ್ಯವಸ್ಥೆ ಎಂಬುದನ್ನು ಅರಿಯುವರು.**<br><br>• ಯಾವ ಯಾವ ಕೆಲಸಗಳಿಗೆ ಕುಟುಂಬದ ಯಾವ ಯಾವ ಸದಸ್ಯರು ನೆರವಾಗುತ್ತಾರೆ ಎಂಬುದನ್ನು ಹೇಳುವರು.<br>• ತನ್ನ ಹಲವು ಕೆಲಸಗಳಲ್ಲಿ ಕುಟುಂಬದ ಸದಸ್ಯರ ನೆರವು ಬೇಕೇ ಬೇಕು ಎಂಬುದನ್ನು ವ್ಯಕ್ತಪಡಿಸುವರು.<br>• ತನ್ನ ಮನೆಯ ಯಾವ ಕೆಲಸಗಳಲ್ಲಿ ತನ್ನ ನೆರಹೊರೆಯವರು ನೆರವು ನೀಡುತ್ತಾರೆ ಎಂಬುದನ್ನು ಗುರುತಿಸುವರು. | ➢ **ಕುಟುಂಬದಲ್ಲಿನ ದಿನ ನಿತ್ಯದ ಆಚರಣೆಗಳು, ಹಬ್ಬಗಳು, ಕುಟುಂಬದ ಭಾಷೆ, ಉಡುಗೆ ತೊಡಿಗೆಯನ್ನು ಅರಿಯುವರು.**<br><br>• ಕುಟುಂಬದಲ್ಲಿ ದಿನ ನಿತ್ಯ ನಡೆಯುವ ಆಚರಣೆಗಳು, ಹಬ್ಬಗಳು, ವಿಶೇಷತೆ, ಕುಟುಂಬದ ಭಾಷೆ, ಉಡುಗೆ ತೊಡುಗೆಯನ್ನು ಗುರುತಿಸಿ ಪಟ್ಟಿ ಮಾಡುವರು. | |

| | | | | |
|---|---|---|---|---|
| 1. ಕುಟುಂಬ ಮತ್ತು ಸಂಬಂಧ | | ➢ **ಕುಟುಂಬದ /ಸಂಬಂಧಿಕರ, ಕುಟುಂಬದ ಸಮಾರಂಭಗಳಲ್ಲಿ ಭಾಗವಹಿಸುವ ಬಗ್ಗೆ ವರದಿಮಾಡುವರು.**<br><br>• ಮದುವೆ, ನಾಮಕರಣ ಇತ್ಯಾದಿ ಸಮಾರಂಭಗಳಲ್ಲಿ ಭಾಗವಹಿಸಿ ಅಲ್ಲಿ ನಡೆಯುವ ಕಾರ್ಯಕ್ರಮಗಳನ್ನು ವೀಕ್ಷಿಸಿ, ಮೌಖಿಕ ವರದಿ ಮಾಡುವರು. | ➢ **ಸಮುದಾಯದಲ್ಲಿ ನಡೆಯುವ ಸಮಾರಂಭ, ಜಾತ್ರೆ ಮತ್ತು ಹಬ್ಬಗಳಲ್ಲಿ ಭಾಗವಹಿಸಿ, ಅಲ್ಲಿರುವ ಪರಸ್ಪರ ಸಹಕಾರವನ್ನು ಗುರುತಿಸುವರು.**<br><br>• ತನ್ನ ಊರಿನಲ್ಲಿ ನಡೆಯುವ ಜಾತ್ರೆ, ಹಬ್ಬಗಳಲ್ಲಿ ಭಾಗವಹಿಸಿ ಅಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಪಟ್ಟಿಮಾಡುವರು.<br><br>• ಈ ಕಾರ್ಯಕ್ರಮಗಳಿಗೆ ಯಾರು ಯಾರು ನೆರವು ನೀಡುತ್ತಾರೆ ಎಂಬುದನ್ನು ಗುರುತಿಸಿ ಒಂದು ಉದಾಹರಣೆಯ ಮೂಲಕ ಲಿಖಿತ/ಮೌಖಿಕ ವರದಿ ಮಾಡುವರು.<br><br>• ಸಮುದಾಯದಲ್ಲಿನ ಸಮಾರಂಭಗಳಿಗೆ ಎಲ್ಲರ ಸಹಕಾರದ ಅಗತ್ಯವಿದೆ ಎನ್ನುವುದನ್ನು ವ್ಯಕ್ತಪಡಿಸುವರು. | ➢ **ಶಾಲೆಯ ಸಮಾರಂಭದಲ್ಲಿ ಭಾಗವಹಿಸಿ ಸಹಕಾರವನ್ನು ನೀಡುವರು.**<br><br>• ತನ್ನ ಶಾಲೆಯಲ್ಲಿ ನಡೆಯುವ ಸಮಾರಂಭಗಳು ಮತ್ತು ದಿನಾಚರಣೆಗಳನ್ನು ಪಟ್ಟಿಮಾಡುವರು.<br><br>• ತಾನು ಭಾಗವಹಿಸಿ, ನೆರವಾದ ಸಮಾರಂಭಗಳ ಪಟ್ಟಿ ಮಾಡುವರು.<br><br>• ತನ್ನ ಶಾಲೆಯ ಸಮಾರಂಭದಲ್ಲಿ ತಾನು ಮತ್ತು ಗೆಳೆಯರು ಯಾವ ರೀತಿಯ ಸಹಾಯಮಾಡಿರುವೆವು ಎಂದು ತಿಳಿಸುವರು.<br><br>• ತಾನು ಶಾಲೆಯ ಒಂದು ಭಾಗ, ಶಾಲಾ ಕೆಲಸಗಳಲ್ಲಿಯೂ ತನ್ನ ಜವಾಬ್ದಾರಿ ಇದೆ ಎಂಬುದನ್ನು ಉದಾಹರಣೆ ಸಹಿತ ವಿವರಿಸುವರು. |
| | | | | ➢ **ರಾಷ್ಟ್ರೀಯ ಹಬ್ಬಗಳ ಮಹತ್ವ ಅರಿಯುವರು. ರಾಷ್ಟ್ರೀಯ ಸಂಕೇತಗಳನ್ನು ಗುರುತಿಸುವರು ಮತ್ತು ಗೌರವಿಸುವರು.**<br><br>• ರಾಷ್ಟ್ರೀಯ ಹಬ್ಬಗಳನ್ನು ಪಟ್ಟಿ ಮಾಡುವರು.<br><br>• ರಾಷ್ಟ್ರೀಯ ಹಬ್ಬಗಳ ಮಹತ್ವವನ್ನು ವಿವರಿಸುವರು. |

| | | | | |
|---|---|---|---|---|
| | | | | • ರಾಷ್ಟ್ರೀಯ ಸಂಕೇತಗಳನ್ನು ಗುರುತಿಸುವರು.<br><br>• ರಾಷ್ಟ್ರಧ್ವಜ ಹಾರಿಸುವಾಗ ಮತ್ತು ರಾಷ್ಟ್ರಗೀತೆ ಹಾಡುವಾಗ ತಾನು ಹೇಗಿರಬೇಕು ಎಂಬುದನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸುವರು. |
| | ➢ **ವಿವಿಧ ಭಾವನೆಗಳನ್ನು ವ್ಯಕ್ತಪಡಿಸುವರು.**<br><br>• ಭಾವನೆಗಳನ್ನು ಸಂದರ್ಭಕ್ಕೆ ಅನುಗುಣವಾಗಿ ಗುರ್ತಿಸುವರು. [ಸಂತೋಷ, ದುಃಖ, ಭಯ, ಕೋಪ] | ➢ **ನಾವು ಇತರರಂತೆ ಇದ್ದೇವೆ. ಆದರೂ ಇತರರಿಗಿಂತ ಬೇರೆಯಾಗಿದ್ದೇವೆ ಎಂಬುವುದನ್ನು ತಿಳಿಯುವರು.**<br><br>• ತನ್ನ ಮತ್ತು ತನ್ನ ಸ್ನೇಹಿತರ ನಡುವೆ ದೈಹಿಕ ಸಾಮರ್ಥ್ಯಗಳನ್ನು ಗುರುತಿಸುವರು.<br><br>• ತನ್ನ ಮತ್ತು ತನ್ನ ಸ್ನೇಹಿತರ ನಡುವೆ ವ್ಯತ್ಯಾಸಗಳನ್ನು (ಕೂದಲು, ಗಾತ್ರ, ಎತ್ತರ ಇತ್ಯಾದಿ) ಗುರುತಿಸುವರು.<br><br>• ಉದಾಹರಣೆಗಳ ಮೂಲಕ ತಾನು ತನ್ನ ಸ್ನೇಹಿತರಂತೆ ಇದ್ದೇನೆ ಎಂಬುದನ್ನು ಹೇಳುವರು.<br><br>• ಉದಾಹರಣೆಗಳ ಮೂಲಕ ನಾನು ಇತರರಂತೆ ಇದ್ದರೂ ಬೇರೆಯಾಗಿದ್ದೇನೆ ಎಂಬುದನ್ನು ವಿವರಿಸುವರು. | ➢ **ಭೌತಿಕ ಲಕ್ಷಣಗಳು, ಮೌಲ್ಯಗಳು ಮತ್ತು ಹವ್ಯಾಸಗಳ ಮೇಲೆ ಕುಟುಂಬದ ಪ್ರಭಾವವನ್ನು ಗಮನಿಸುವರು.**<br><br>• ಕುಟುಂಬ ಸದಸ್ಯರ ಅನುವಂಶೀಯ ಲಕ್ಷಣಗಳಲ್ಲಿರುವ ಸಾಮ್ಯತೆಯನ್ನು ಗುರುತಿಸುವರು.<br><br>• ತನ್ನ ಕುಟುಂಬದ ಸದಸ್ಯರ ಪಟ್ಟಿಮಾಡಿ ತನಗೂ ಮತ್ತು ಅವರಿಗೂ ಇರುವ ಸಾಮ್ಯತೆ/ವ್ಯತ್ಯಾಸ (ಮೂಗಿನ ಆಕಾರ,<br><br>• ತನ್ನ ಯಾವ ದೈಹಿಕ ಲಕ್ಷಣ, ತನ್ನ ಕುಟುಂಬದ ಯಾವ ಸದಸ್ಯರನ್ನು ಹೋಲುತ್ತದೆ ಎಂಬುದನ್ನು ವಿಶ್ಲೇಷಿಸುವರು.<br><br>• ಕುಟುಂಬದ ಮೌಲ್ಯಗಳನ್ನು (ಗಿಡ ಬೆಳೆಸುವುದು, ಸಸ್ಯ ಮತ್ತು ಪ್ರಾಣಿ ಪಾಲನೆ, ಸಂರಕ್ಷಣೆ, ಸ್ವಚ್ಛತೆ, ಓರಣ ಇತ್ಯಾದಿ) | ➢ **ಕುಟುಂಬದ ಮೌಲ್ಯಗಳನ್ನು, ಸಮಾಜದಲ್ಲಾದ ಬದಲಾವಣೆಯನ್ನು**<br><br>**ಗುರುತಿಸುವರು.**<br><br>• ಕುಟುಂಬದ ಸದಸ್ಯರ ಗುಣಗಳನ್ನು ಮತ್ತು ಕೌಶಲ್ಯಗಳನ್ನು ಪಟ್ಟಿಮಾಡುವರು.<br><br>• ಸ್ನೇಹಿತರ ಗುಣಗಳನ್ನು ಮತ್ತು ಕೌಶಲಗಳನ್ನು ಪಟ್ಟಿಮಾಡುವರು.<br><br>• ಪಟ್ಟಿಯನ್ನು ವಿಶ್ಲೇಷಿಸಿ, ಪ್ರತಿ ವ್ಯಕ್ತಿ ವಿಶಿಷ್ಟ ಎಂಬುದನ್ನು ವಿವರಿಸುವರು.<br><br>• ತಾನು ಇಷ್ಟ ಪಡುವ ಒಬ್ಬ ವ್ಯಕ್ತಿಯ ವಿಶಿಷ್ಟ ಗುಣಗಳನ್ನು ವರ್ಣಿಸುವರು. |

| | | | | |
|---|---|---|---|---|
| | | | • ತಾನು ಅನುಸರಿಸುತ್ತಿರುವ ಕುಟುಂಬದ ಮೌಲ್ಯಗಳನ್ನು ವ್ಯಕ್ತಪಡಿಸುವರು.<br><br>• ಕುಟುಂಬದ ಸದಸ್ಯರ ಹವ್ಯಾಸಗಳನ್ನು ಗುರುತಿಸುವರು.<br><br>• ತನಗೆ ಇಷ್ಟವಾದ ಹವ್ಯಾಸವನ್ನು ಪ್ರದರ್ಶಿಸುವರು. | • ಕುಟುಂಬದ ಸದಸ್ಯರ ವೃತ್ತಿ, ಹವ್ಯಾಸಗಳನ್ನು ಬರೆಯುವರು.<br><br>• ಸದಸ್ಯರ ವೃತ್ತಿ, ಹವ್ಯಾಸಗಳಿಂದ ಸಮಾಜಕ್ಕೆ ಆಗುವ ಉಪಯೋಗವನ್ನು ವಿವರಿಸುವರು.<br><br>• ತಾನು ಏನಾಗಬೇಕೆಂದು ಬಯಸುವೆ ಮತ್ತು ಏಕೆ ಎಂಬುದನ್ನು ಕಾರಣಗಳ ಸಹಿತ ನಿರೂಪಿಸುವರು.<br><br>• ಹವ್ಯಾಸ/ವೃತ್ತಿಯಿಂದ ಬದಲಾವಣೆಯಾದ ವ್ಯಕ್ತಿಯನ್ನು (ತನಗೆ ತಿಳಿದ ಒಬ್ಬ ವ್ಯಕ್ತಿಯ ಬಗ್ಗೆ) ಪರಿಚಯಿಸುವರು.<br><br>➢ **ಕುಟುಂಬದ ಸದಸ್ಯರ, ಸ್ನೇಹಿತರ ಗುಣಗಳು ಮತ್ತು ಕೌಶಲಗಳನ್ನು ಗುರುತಿಸುವರು**<br><br>• ಪ್ರತಿ ವ್ಯಕ್ತಿಯು ವಿಶಿಷ್ಟ ಎಂದು ತಿಳಿಯುವರು. |
| | | ➢ **ರೋಗಿಗಳಿಗೆ ಹಾಗೂ ವಯಸ್ಸಾದವರಿಗೆ ನೆರವು ನೀಡುವ ಮನೋಭಾವವನ್ನು ಬೆಳೆಸಿಕೊಳ್ಳುವರು.**<br><br>• ಚಿತ್ರಗಳ ಮೂಲಕ ರೋಗಿಗಳೊಂದಿಗೆ ಮತ್ತು ವಯಸ್ಸಾದವರೊಂದಿಗೆ ತಾನು ನಡೆದುಕೊಳ್ಳಬೇಕಾದ ರೀತಿಯನ್ನು ವಿವರಿಸುವರು. | ➢ **ವಿಶೇಷ ಆವಶ್ಯಕತೆಯುಳ್ಳವರ ಬಗ್ಗೆ ಸಂವೇದನಾಶೀಲರಾಗಿ ಸಹಾಯ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳುವರು.**<br><br>• ಚಿತ್ರಗಳ ಮೂಲಕ ವಿಶೇಷ ಆವಶ್ಯಕತೆಯುಳ್ಳವರೊಂದಿಗೆ ತಾನು ನಡೆದುಕೊಳ್ಳಬೇಕಾದ ರೀತಿಯನ್ನು ತಿಳಿಯುವರು. | ➢ **ವಿಶೇಷ ಆವಶ್ಯಕತೆಯಿದ್ದವರ ನಡುವಿನ ಸಂವಹನಾ ವಿಧಾನಗಳನ್ನು ಅರಿಯುವರು.**<br><br>• ಪ್ರಾತ್ಯಕ್ಷಿಕೆಯ ಮೂಲಕ ವಿಶೇಷ ಆವಶ್ಯಕತೆಯುಳ್ಳವರೊಂದಿಗೆ ನಡೆಸುವ ಸಂವಹನ ವಿಧಾನಗಳನ್ನು ಪ್ರದರ್ಶಿಸುವರು. |

| | | | | |
|---|---|---|---|---|
| | | | • ತನ್ನ ಶಾಲೆಯಲ್ಲಿರುವ ವಿಶೇಷ ಆವಶ್ಯಕತೆಯುಳ್ಳವರೊಂದಿಗೆ ನೆರವಾಗಿದ್ದ ಸಂದರ್ಭವನ್ನು ವಿವರಿಸುವರು. | |
| **ವಿಷಯ : ಕೆಲಸ ಮತ್ತು ಆಟ** | | | | |
| | | | ➢ **ತನ್ನ ದಿನ ನಿತ್ಯದ ಕೆಲಸದ ಚಾರ್ಟ ತಯಾರಿಸುವರು.**<br>• ತನ್ನ ದಿನನಿತ್ಯದ ದಿನಚರಿ ಕೆಲಸಗಳನ್ನು ಪಟ್ಟಿ ಮಾಡುವರು.<br>• ಯಾವುದರ ನಂತರ ಯಾವ ಕೆಲಸ ಎಂಬುದನ್ನು ಅನುಕ್ರಮತೆ ಆಧರಿಸಿ ಬರೆಯುವರು.<br>• ಚಾರ್ಟ ತಯಾರಿಸುವರು. | ➢ **ಸ್ಥಳೀಯ ಹಾಗೂ ವಿವಿಧ ಪ್ರದೇಶಗಳಲ್ಲಿನ ವಿವಿಧ ಕಸುಬುಗಳನ್ನು (ವೃತ್ತಿಗಳನ್ನು) ಗುರುತಿಸುವರು.**<br>• ತನ್ನ ಸ್ಥಳೀಯ, ಪ್ರದೇಶದಲ್ಲಿನ ವಿವಿಧ ಕಸುಬುಗಳನ್ನು ಗುರುತಿಸಿ ಬರೆಯುವರು.<br>• ಇವರು ನಮಗೆ ಯಾವ ರೀತಿಯಿಂದ ಸಹಾಯಮಾಡುವರು ಎಂಬುದನ್ನು ಚಾರ್ಟ ಮೂಲಕ ವ್ಯಕ್ತಪಡಿಸುವರು. |
| | | | ➢ **ಕೆಲವು ಮಕ್ಕಳು ದುಡಿಮೆಯಲ್ಲಿ ತೊಡಗಿರಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಅರಿಯುವರು.**<br>• ನೀಡಿದ ಪ್ರಕರಣ ಅಧ್ಯಯನ (ಕೇಸ್‌ಸ್ಟಡಿ) ವನ್ನು ಓದಿ ಪರಿಸ್ಥಿತಿ ವಿಶ್ಲೇಷಿಸುವರು. | ➢ **ದುಡಿಯುತ್ತಿರುವ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವರು.**<br>• ದುಡಿಯುತ್ತಿರುವ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬರೆಯುವರು. |

| | | | | |
|---|---|---|---|---|
| 2. ಕೆಲಸ ಮತ್ತು ಆಟ | | | • ಅಧ್ಯಯನದ ಆಧಾರದಲ್ಲಿ ಮಕ್ಕಳು ದುಡಿಮೆಯಲ್ಲಿ ತೊಡಗಬೇಕಾದ ಅನಿವಾರ್ಯ ಕಾರಣಗಳನ್ನು ಗುರುತಿಸಿ ಬರೆಯುವರು. | • ಈ ಸಮಸ್ಯೆಗಳನ್ನು ದೈಹಿಕ, ಮಾನಸಿಕ ತೊಂದರೆಗಳೆಂದು ವರ್ಗೀಕರಿಸುವರು.<br><br>• ಚರ್ಚೆಯ ಮೂಲಕ ಬಾಲಕಾರ್ಮಿಕ ಪದ್ಧತಿ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವರು. |
| | ➢ **ಮನೆಯಲ್ಲಿ ಆಡುವ ಆಟಗಳನ್ನು ಹೆಸರಿಸುವರು.**<br><br>• ತಾನು ಆಡುವ ಆಟಗಳನ್ನು ಹೆಸರಿಸುವರು. | ➢ **ಶಾಲೆಯ ಒಳಗೆ ಮತ್ತು ಹೊರಗೆ ಆಡುವ ಆಟಗಳನ್ನು ಪಟ್ಟಿ ಮಾಡುವರು.**<br><br>• ಶಾಲೆಯಲ್ಲಿ ತಾನು ಆಡುವ ಆಟಗಳನ್ನು ಹೇಳುವರು.<br><br>• ಚಿತ್ರಗಳ ಮೂಲಕ ಒಳಗೆ ಮತ್ತು ಹೊರಗೆ ಆಡುವ ಆಟಗಳನ್ನು ಗುರುತಿಸುವರು. | ➢ **ಆಟಗಳನ್ನು ಒಳಾಂಗಣ ಮತ್ತು ಹೊರಾಂಗಣ ಆಟಗಳಾಗಿ ವರ್ಗೀಕರಿಸುವರು. ಸ್ಥಳೀಯ ಮತ್ತು ಸಾಂಪ್ರದಾಯಿಕ ಆಟಗಳ ಬಗ್ಗೆ ಹಿರಿಯರಿಂದ ತಿಳಿಯುವರು**<br><br>• ತಾನು ಆಡುವ ಆಟಗಳನ್ನು ಪಟ್ಟಿ ಮಾಡುವರು.<br><br>• ಈ ಆಟಗಳನ್ನು ಹೊರಾಂಗಣ ಮತ್ತು ಒಳಾಂಗಣ ಆಟಗಳೆಂದು ವರ್ಗೀಕರಿಸುವರು.<br><br>• ಸ್ಥಳೀಯ ಆಟಗಳನ್ನು ಹೆಸರಿಸುವರು. | ➢ **ಆಟಗಳು ಮತ್ತು ನಿಯಮಗಳ ಪರಿಚಯ ಮಾಡಿಕೊಳ್ಳುವುದು.**<br><br>• ತಾನು ಇಷ್ಟಪಡುವ ಯಾವುದಾದರೂ ಒಂದು ಆಟದ ನಿಯಮವನ್ನು ಬರೆಯುವರು.<br><br>• ತನ್ನ ಜಿಲ್ಲೆಯ ಪ್ರಸಿದ್ಧ ಆಟಗಳ ಪರಿಚಯ ಮಾಡಿಕೊಡುವರು. |
| | | | ➢ **ಆಟಗಳಿಂದಾಗುವ ಪ್ರಯೋಜನ ತಿಳಿಯುವರು.**<br><br>• ಆಟಗಳಿಂದ ತಮಗೆ ಆಗುವ ಪ್ರಯೋಜನವನ್ನು ವಿವರಿಸುವರು. | ➢ **ಆಟದಿಂದ ಸಾಮಾಜಿಕ ಸಂಬಂಧಗಳು ವೃದ್ಧಿಯಾಗುವುದೆಂದು ಗುರುತಿಸುವರು.**<br><br>• ಗುಂಪಾಟ ಆಡುವುದರಿಂದಾಗುವ ಪ್ರಯೋಜನಗಳನ್ನು ಪಟ್ಟಿ ಮಾಡುವರು. |

| | | | | |
|---|---|---|---|---|
| | | | | • ಗುಂಪಾಟದಿಂದ ಸಾಮಾಜಿಕ ಸಂಬಂಧಗಳು ಹೇಗೆ ವೃದ್ಧಿಯಾಗುವುದೆಂದು ವಿವರಿಸುವರು. |
| | | | ➢ **ಕಥೆಪುಸ್ತಕಗಳು, ಆಟಗಳು, ರೇಡಿಯೋ, ದೂರದರ್ಶನಗಳಿಂದ ದೊರೆಯುವ ವಿವಿಧ ಮನರಂಜನೆಯ ಬಗ್ಗೆ ತಿಳಿಯುವರು.**<br><br>• ತಾನು ಓದಿರುವ ಕಥೆಪುಸ್ತಕ, ಕೇಳಿರುವ ರೇಡಿಯೋ ಕಾರ್ಯಕ್ರಮ, ನೋಡಿರುವ ದೂರದರ್ಶನ ಕಾರ್ಯಕ್ರಮಗಳನ್ನು ಪಟ್ಟಿ ಮಾಡುವರು.<br><br>• ಇದರಿಂದ ತನಗಾದ ಪ್ರಯೋಜನಗಳನ್ನು ವಿವರಿಸುವರು.<br><br>• ಕೇಳಿದ, ನೋಡಿದ, ಓದಿದ ಒಂದು ಕಾರ್ಯಕ್ರಮ ಅಥವಾ ಕಥೆಯ ಬಗ್ಗೆ ವಿವರಣೆ ನೀಡುವರು. | ➢ **ಜಾತ್ರೆ ಮತ್ತು ಸರ್ಕಸ್ಸಿನ ಮೂಲಕ ಮನರಂಜನೆಯ ಬಗ್ಗೆ ವಿವರಿಸುವರು.**<br><br>• ತಾನು ನೋಡಿದ ಜಾತ್ರೆ ಮತ್ತು ಸರ್ಕಸ್ಸ ಬಗ್ಗೆ ಟಿಪ್ಪಣಿ ಬರೆಯುವರು.<br><br>• ಜಾತ್ರೆ ಮತ್ತು ಸರ್ಕಸ್ಸಿನಿಂದ ಆಗುವ ಪ್ರಯೋಜನಗಳನ್ನು ಬರೆಯುವರು.<br><br>• ಜಾತ್ರೆ ಮತ್ತು ಸರ್ಕಸ್ಸಿನಲ್ಲಿ ತನಗೆ ಇಷ್ಟವಾಗದ ಅಂಶಗಳನ್ನು ಕಾರಣ ಸಹಿತ ಚಾರ್ಟಿನಲ್ಲಿ ನಮೂದಿಸುವರು. |
| **ವಿಷಯ : ಪ್ರಾಣಿಗಳು** | | | | |
| | ➢ **ಸುತ್ತಲೂ ಇರುವ ಸಾಮಾನ್ಯ ಪ್ರಾಣಿಗಳನ್ನು ಗುರುತಿಸುವುದು.**<br><br>• ತನ್ನ ಸುತ್ತಲೂ ಇರುವ ಸಾಮಾನ್ಯ ಪ್ರಾಣಿಗಳನ್ನು (ಕನಿಷ್ಟ 10) ಗುರುತಿಸಿ ಹೇಳುವರು. | ➢ **ಸ್ಥಳೀಯ ಪ್ರಾಣಿಗಳು ಮತ್ತು ಪಕ್ಷಿಗಳನ್ನು ಗುರುತಿಸುವುದು.**<br><br>• ತಾನು ನೋಡಿರುವ ಸ್ಥಳೀಯ ಪ್ರಾಣಿಗಳು (ಕನಿಷ್ಟ 10) ಮತ್ತು ಪಕ್ಷಿ (ಕನಿಷ್ಟ 5)ಗಳನ್ನು ಹೆಸರಿಸುವರು. | ➢ **ನೋಡಿರುವ ಪ್ರಾಣಿಗಳ ಗಾತ್ರ, ಆಕಾರ, ವಾಸಿಸುವ ಸ್ಥಳಗಳ ವೈವಿಧ್ಯತೆಯ ಬಗ್ಗೆ ವರ್ಣಿಸುವರು.**<br><br>• ತಾನು ನೋಡಿರುವ 5 ಪ್ರಾಣಿಗಳ ಗಾತ್ರ, ಆಕಾರ, ವಾಸಿಸುವ ಸ್ಥಳಗಳನ್ನು ವರ್ಣಿಸುವರು.<br><br>• ಪ್ರತಿ ಪ್ರಾಣಿ, ಪಕ್ಷಿಯೂ ವಿಶಿಷ್ಟ ಎಂಬುದನ್ನು ಉದಾಹರಣೆಗಳ (ಕನಿಷ್ಟ 2) ಮೂಲಕ ಹೇಳುವರು. | ➢ **ಪ್ರಾಣಿಗಳ ವರ್ತನೆಯನ್ನು ವೀಕ್ಷಿಸುವರು.**<br><br>• ತಾನು ಚೆನ್ನಾಗಿ ಗಮನಿಸಿದ 3 ಪ್ರಾಣಿಗಳ ವರ್ತನೆಯನ್ನು ವಿವರಿಸುವರು.<br><br>ಉದಾಹರಣೆ ಇರುವೆ, ಪಕ್ಷಿಗಳು. |

| | | | | |
|---|---|---|---|---|
| | | • ಸ್ಥಳೀಯ ಪ್ರಾಣಿ, ಪಕ್ಷಿಗಳ ಆಹಾರವನ್ನು ಗಮನಿಸುವರು.<br><br>• ಸ್ಥಳೀಯ ಪ್ರಾಣಿ, ಪಕ್ಷಿಗಳ ಆಹಾರವನ್ನು ಹೇಳುವರು | | • ಪ್ರಾಣಿಗಳು ತಮ್ಮ ಮರಿಗಳನ್ನು ಹೇಗೆ ಪೋಷಿಸುತ್ತವೆ ಎಂಬುದನ್ನು ಉದಾಹರಣೆಗಳ ಸಹಿತ ವರ್ಣಿಸುವರು. |
| | | ➢ **ತೆವಳುವ, ಹಾರುವ ಜೀವಿಗಳು ಮತ್ತು ಕೀಟಗಳನ್ನು ಗುರುತಿಸಿ ಹೇಳುವರು.**<br><br>• ತಾನು ನೋಡಿರುವ ಪ್ರಾಣಿಗಳನ್ನು (ಜೀವಿಗಳನ್ನು) ಹೆಸರಿಸುವರು.<br><br>• ಇವುಗಳಲ್ಲಿ ತೆವಳುವ ಜೀವಿ ಮತ್ತು ಹಾರುವ ಪ್ರಾಣಿಗಳನ್ನು ಗುರುತಿಸುವರು.<br><br>• ಕೀಟಗಳ ಕನಿಷ್ಟ ಮೂರು ಲಕ್ಷಣಗಳನ್ನು ಹೇಳುವರು.<br><br>• ಕೀಟಗಳಿಗೆ ಉದಾಹರಣೆ ನೀಡುವರು. | ➢ **ಪಕ್ಷಿಗಳ ಧ್ವನಿ, ಆಹಾರ, ಆವಾಸ, ಕೊಕ್ಕು ಮುಂತಾದವುಗಳನ್ನು ಆಧರಿಸಿ ಪಕ್ಷಿಗಳನ್ನು ವರ್ಣಿಸುವರು.**<br><br>• ತಾನು ನೋಡಿರುವ ಯಾವುದಾದರೂ ಎರಡು ಪಕ್ಷಿಗಳ ಧ್ವನಿ, ಆಹಾರ, ಆವಾಸ, ಕೊಕ್ಕುಗಳನ್ನು ಆಧರಿಸಿ ಪಕ್ಷಿಗಳನ್ನು ವರ್ಣಿಸುವರು.<br><br>• ಪ್ರಾಣಿಗಳನ್ನು ಅವುಗಳ ಆವಾಸ, ದೇಹದ ಆಕಾರ ಮತ್ತು ಕಾಲುಗಳ ಆಧಾರದ ಮೇಲೆ ವರ್ಗೀಕರಿಸುವುದು.<br><br>• ನೆಲ, ನೀರು ಮತ್ತು ಮರದ ಮೇಲೆ ವಾಸಿಸುವ ಪ್ರಣಿಗಳನ್ನು ಗುರುತಿಸಿ ವರ್ಗೀಕರಿಸುವರು.<br><br>• ದೇಹದ ಗಾತ್ರಕ್ಕೆ ಅನುಗುಣವಾಗಿ ದೊಡ್ಡದು ಮತ್ತು ಚಿಕ್ಕದು ಎಂದು ವರ್ಗೀಕರಿಸುವರು. | |

| | | | | |
|---|---|---|---|---|
| | | | • ಕಾಲುಗಳ ಸಂಖ್ಯೆಗೆ ಅನುಗುಣವಾಗಿ ಪ್ರಾಣಿ, ಪಕ್ಷಿಗಳನ್ನು ವರ್ಗೀಕರಿಸಿ, ಚಾರ್ಟನಲ್ಲಿ ನಮೂದಿಸುವರು. (ಚಿತ್ರ ಸಹಿತ) | |
| 3. ಪ್ರಾಣಿಗಳು | | | ➢ **ಪ್ರಾಣಿ ಮತ್ತು ಸಸ್ಯಗಳಿಗೆ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವರು.**<br>• ಪ್ರಾಣಿ ಮತ್ತು ಸಸ್ಯಗಳಿಗೂ ಇರುವ ಕನಿಷ್ಟ 3 ಸಾಮ್ಯತೆಗಳನ್ನು ಗುರುತಿಸುವರು.<br>• ಪ್ರಾಣಿ ಮತ್ತು ಸಸ್ಯಗಳಿಗಿರುವ ಮೂರು ವ್ಯತ್ಯಾಸಗಳನ್ನು ಹೇಳುವರು.<br>• ಮೊಟ್ಟೆಯಿಡುವ ಮತ್ತು ಮರಿಹಾಕುವ ಪ್ರಾಣಿಗಳಿಗೆ 2 ಉದಹರಣೆಕೊಡುವರು.<br>• ಬೀಜಗಳಿಂದ ಮತ್ತು ಕಾಂಡದಿಂದ ಸಸಿ ಬೆಳೆಯುವ ಸಸ್ಯಗಳಿಗೆ 2 ಉದಹರಣೆ ಕೊಡುವರು. | ➢ **ಪ್ರಾಣಿಗಳಿಗೂ ಮತ್ತು ಮಾನವರಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವರು.**<br>• ಪ್ರಾಣಿಗಳಿಗೂ ಮತ್ತು ಮಾನವರಿಗೂ ಇರುವ 3 ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಬರೆಯುವರು. |
| | | ➢ **ಸಾಕುಪ್ರಾಣಿಗಳು, ಸಾಕದೇ ಇರುವ ಪ್ರಾಣಿಗಳನ್ನು ವರ್ಗೀಕರಿಸುವರು.**<br>• ತಮಗೆ ತಿಳಿದಿರುವ ಪ್ರಾಣಿಗಳ ಹೆಸರುಗಳನ್ನು ಪಟ್ಟಿಮಾಡುವರು. | ➢ **ಮನೆಯಲ್ಲಿ ಕಂಡುಬರುವ ಇತರೇ ಸಾಕುಪ್ರಾಣಿಗಳು ಮತ್ತು ಇತರೇ ಪ್ರಾಣಿಗಳು, ಕೀಟಗಳು ಮತ್ತು ನಿಶಾಚರಿ ಪ್ರಾಣಿಗಳನ್ನು ಗುರುತಿಸುವರು.**<br>• ಮನೆಯಲ್ಲಿ ಕಂಡುಬರುವ ಎಲ್ಲಾ ಪ್ರಾಣಿಗಳ ಹೆಸರುಗಳನ್ನು ಪಟ್ಟಿ ಮಾಡುವರು. | |

| | | | | |
|---|---|---|---|---|
| | | • ಇವುಗಳನ್ನು ಸಾಕು ಪ್ರಾಣಿಗಳು ಮತ್ತು ಸಾಕದೇ ಇರುವ ಪ್ರಾಣಿಗಳು ಎಂದು ಗುರುತಿಸುವರು. | • ಇವು ಮನೆಯ ಯಾವ ಭಾಗಗಳಲ್ಲಿ ಅಥವಾ ಎಲ್ಲೆಲ್ಲಿ ಕಂಡುಬರುತ್ತವೆ ಎಂಬುದನ್ನು ಚಾರ್ಟ ಮೂಲಕ ವ್ಯಕ್ತಪಡಿಸುವರು.<br>• ರಾತ್ರಿ ವೇಳೆಯಲ್ಲಿ ಮಾತ್ರ ಕಂಡುಬರುವ ಮೂರು ಪ್ರಾಣಿಗಳ ಹೆಸರುಗಳನ್ನು ಹೇಳುವರು. | |
| | | ➢ **ಸಾಕುಪ್ರಾಣಿಗಳ ಪಾಲನೆ ಮತ್ತು ಪೋಷಣೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವರು.**<br>• ನನಗೆ ಯಾವ ಯಾವ ಪ್ರಾಣಿಗಳನ್ನು ಸಾಕಲು ಇಷ್ಟ ಎಂದು ಹೇಳುವರು.<br>• ತಮ್ಮ ಮನೆಯಲ್ಲಿ ಒಂದು ಸಾಕುಪ್ರಾಣಿ ಇದ್ದಲ್ಲಿ (ಹಸು, ನಾಯಿ, ಬೆಕ್ಕು ಇತರೆ) ಅದನ್ನು ಹೇಗೆ ಸಾಕುವೆ? ಎಂಬುದನ್ನು ಹೇಳುವರು.<br>• ಪ್ರಾಣಿಗಳೊಂದಿಗೆ ನಾವು ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಚಿತ್ರಗಳ ಮೂಲಕ ಗುರುತಿಸುವರು. | | ➢ **ಪ್ರಾಣಿಗಳಿಗೂ, ಮಾನವರಿಗೂ ಇರುವ ಸಂಬಂಧ (ಅವಲಂಬನೆ)ವನ್ನು ಅರಿಯುವರು.**<br>• ಜೇನು ಸಂಗ್ರಹಣೆಯ ವಿಧಾನವನ್ನು ಮತ್ತು ಉಪಯೋಗವನ್ನು ಅರಿಯುವರು.<br>• ಪ್ರಾಣಿಗಳಿಂದ ನಮಗಾಗುವ 5 ಉಪಯೋಗಗಳನ್ನು ಪಟ್ಟಿ ಮಾಡುವರು.<br>• ಚಿತ್ರಗಳ ಮೂಲಕ ಪ್ರಾಣಿಗಳಿಂದ ನಮಗಾಗುವ ಪ್ರಯೋಜನಗಳನ್ನು ಗುರುತಿಸುವರು.<br>• ಯಾವುದಾದರೂ ಒಂದು ಪ್ರಾಣಿಯನ್ನು ಸಾಕುವ ವಿಧಾನ ಮತ್ತು ಅದರಿಂದ ಪ್ರಯೋಜನ ಪಡೆಯುವ ಕ್ರಮವನ್ನು ವಿವರಿಸುವರು. |
| **ವಿಷಯ : ಸಸ್ಯಗಳು** | | | | |

| | | | | |
|---|---|---|---|---|
| | **➢ಸುತ್ತಲೂ ಇರುವ ಸಾಮಾನ್ಯ ಸಸ್ಯಗಳನ್ನು ಗುರುತಿಸುವರು.**<br>• ತನ್ನ ಸುತ್ತಲೂ ಇರುವ ಸಾಮಾನ್ಯ ಸಸ್ಯಗಳಲ್ಲಿ ಕನಿಷ್ಟ 5ನ್ನು ಗುರುತಿಸುವರು. | **➢ಸ್ಥಳೀಯ ಮರ, ಗಿಡಗಳನ್ನು ಗುರುತಿಸುವರು.**<br>• ತಾನು ಗುರುತಿಸುವ 5 ಮರಗಳನ್ನು ಹೆಸರಿಸುವರು.<br>• ತಾವು ಗುರುತಿಸುವ 5 ಗಿಡಗಳನ್ನು(ಸಸ್ಯಗಳನ್ನು) ಗುರುತಿಸುವರು. | **➢ಕೃಷಿ ಮೂಲಕ ಬೆಳೆಯುವ ಸಸ್ಯಗಳನ್ನು ಪರಿಚಯ ಮಾಡಿಕೊಳ್ಳುವರು.**<br>• ಸ್ವಾಬಾವಿಕವಾಗಿ ಬೆಳೆಯುವ 5 ಸಸ್ಯಗಳನ್ನು ಹೆಸರಿಸುವರು.<br>• ಕೃಷಿಮಾಡಿ ಬೆಳೆಯುವ 5 ಸಸ್ಯಗಳನ್ನು ಹೆಸರಿಸುವರು.<br>• ಕೃಷಿ ಮೂಲಕ ಸಸ್ಯಗಲನ್ನು ಏಕೆ ಬೆಳೆಸುತ್ತಾರೆ? ಎಮಬುದಕ್ಕೆ 3 ಕಾರಣಗಳನ್ನು ಬರೆಯುವರು. | **➢ಮನೆಯ ಹತ್ತಿರದ ಮತ್ತು ಕಾಡಿನ ಮರಗಳ ಬಗ್ಗೆ ತಿಳಿಯುವರು.**<br>• ತನ್ನ ಮನೆಯ ಹತ್ತಿರ ಗುರುತಿಸಿರುವ ಮರಗಳಲ್ಲಿ 5 ಮರಗಳನ್ನು ವಿವರಿಸುವರು. (ಎಲೆ, ಎತ್ತರ, ಗಾತ್ರ ಇತ್ಯಾದಿ)<br>• ಮನೆ ಕಟ್ಟಲು ಪೀಠೋಪಕರಣಗಳಿಗಾಗಿ ಬಳಸುವ ಮರಗಳನ್ನು ಪಟ್ಟಿ ಮಾಡುವರು.<br>• ಇವುಗಳಲ್ಲಿ ಕಾಡಿನಲ್ಲಿ ಬೆಳೆಯುವ ಮರಗಳನ್ನು ಗುರುತಿಸುವರು. |
| | | **➢ದೈನಂದಿನ ಅವಶ್ಯಕತೆಗಳಿಗಾಗಿ ನಾವು ಸಸ್ಯಗಳನ್ನು ಅವಲಂಬಿಸಿರುವ ಬಗ್ಗೆ ಗುರುತಿಸುವರು.**<br>• ತಾನು ಬಳಸುವ ಪದಾರ್ಥಗಳಲ್ಲಿ ಸಸ್ಯಗಳಿಂದ ದೊರೆಯುವ ಪದಾರ್ಥಗಳನ್ನು ಗುರುತಿಸುವರು.<br>• ಸಸ್ಯಗಳಿಂದಾಗುವ 5 ಉಪಯೋಗಗಳನ್ನು ಹೇಳುವರು | | **➢ಕಾಡಿನಲ್ಲಿ ವಾಸಿಸುವ ಜನರು ತಿನ್ನುವ ಹಣ್ಣುಗಳನ್ನು ಪರಿಚಯ ಮಾಡುವರು.**<br>• ಮರಗಳಿಂದ ದೊರೆಯುವ ಇನ್ನಿತರ ವಸ್ತುಗಳನ್ನು ಉದಾಹರಣೆ ಸಹಿತವಾಗಿ ಪಟ್ಟಿ ಮಾಡುವರು.<br>• ಈ ಪಟ್ಟಿಯಲ್ಲಿ ಕಾಡಿನಲ್ಲಿ ಬೆಳೆಯುವ ಮರಗಳಿಗೆ ಗುರುತು ಹಾಕುವರು. |

| | | | |
|---|---|---|---|
| | • ಚಿತ್ರಗಳ ಮೂಲಕ ಸಸ್ಯದ ಉಪಯೋಗವನ್ನು ಗುರುತಿಸುವರು. | | • ಕಾಡಿನಿಂದ ಆಗುವ 5 ಉಪಯೋಗಗಳನ್ನು ಬರೆಯುವರು.<br><br>➢ **ಮರ ಕಡಿಯಬಾರದು, ಇದು ನಮ್ಮದು ಎನ್ನುವ ಭಾವನೆ ಬೆಳೆಸಿಕೊಳ್ಳುವರು. ಗಿಡಗಳನ್ನು ನೆಟ್ಟು ಬೆಳೆಸುವ ಅಗತ್ಯತೆಯನ್ನು ಮನಗಾಣುವರು.**<br>• ತಾನೆಷ್ಟು ಗಿಡಗಳನ್ನು ನೆಟ್ಟು ಪೋಷಿಸಿರುವೆ (ಶಾಲೆಯಲ್ಲಿ ಮತ್ತು ಮನೆಯಲ್ಲಿ ) ಎಂಬುದನ್ನು ಆಧಾರ ಸಹಿತವಾಗಿ ತೋರಿಸುವರು.<br><br>• ಮರಗಳನ್ನು ಕಡಿಯಬಾರದು ಎಂಬುದಕ್ಕೆ ಕಾರಣಗಳನ್ನು ಸಮರ್ಥವಾಗಿ ಮಂಡಿಸುವರು. |
| | ➢ **ಸಸ್ಯಗಳ ಎತ್ತರ, ಹೂವು, ಬಣ್ಣ, ಎಲೆಗಳ ಆಕಾರ ಮುಂತಾದವುಗಳನ್ನು ಹೋಲಿಸುವರು.**<br><br>• ತಾನು ನೋಡಿರುವ ಸಸ್ಯಗಳಲ್ಲಿ 5 ಸಸ್ಯಗಳ ಎತ್ತರ, ಹೂವು, ಬಣ್ಣ, ಎಲೆಗಳ ಆಕಾರ ಮುಂತಾದವುಗಳನ್ನು ಹೇಳುವರು.<br><br>• ಚಿತ್ರದಲ್ಲಿ ಕೊಟ್ಟಿರುವ ಸಸ್ಯಗಳ ಎತ್ತರವನ್ನಾಧರಿಸಿ ಮರ, ಗಿಡ, ಬಳ್ಳಿ ಎಂಬುದಾಗಿ ಗುರುತಿಸುವರು. | ➢ **ಸಸ್ಯಗಳ ಗಾತ್ರ, ಬೆಳೆಯುವ ಪ್ರದೇಶ, ಬಣ್ಣ, ಆಕಾರಗಳಲ್ಲಿರುವ ವೈವಿಧ್ಯತೆಯ ಬಗ್ಗೆ ತಿಳಿದಿರುವ ಅಂಶಗಳನ್ನು ವ್ಯಕ್ತಪಡಿಸುವರು.**<br><br>• ಚಿತ್ರದಲ್ಲಿರುವ ಸಸ್ಯಗಳು ಯಾವ ಪ್ರದೇಶದಲ್ಲಿ ಬೆಳೆಯುತ್ತವೆ ಎಂಬುದನ್ನು ಹೇಳುವರು.<br><br>• ತಾನು ನೋಡಿರುವ 10 ಸಸ್ಯಗಳ ಹೆಸರನ್ನು ಪಟ್ಟಿ ಮಾಡುವರು.<br><br>• ಎತ್ತರ ಮತ್ತು ಕಾಂಡಕ್ಕೆ ಅನುಸಾರವಾಗಿ ಅವುಗಳನ್ನು ವರ್ಗೀಕರಿಸುವರು. | |

| | | | | |
|---|---|---|---|---|
| | | | ➢ **ಹಿರಿಯರಿಂದ ಹಿಂದೆ ಮತ್ತು ಈಗಿನ ಬದಲಾವಣೆಗಳ ಬಗ್ಗೆ ಮಾಹಿತಿ ಪಡೆಯುವರು. ಪರಿಸರಕ್ಕನುಗುಣವಾಗಿ ಸಸ್ಯಗಳು ಬೆಳೆಯುತ್ತವೆ ಎಂದು ತಿಳಿಯುವರು. (ತಮ್ಮ**<br>• ತಮ್ಮ ಜಿಲ್ಲೆಯಲ್ಲಿ ಬೆಳೆಯುವ ಬೆಳೆಗಳನ್ನು ಪಟ್ಟಿ ಮಾಡುವರು.<br>• 10 ವರ್ಷಗಳ ಹಿಂದೆ ಬೆಳೆಯುತ್ತಿದ್ದ ಬೆಳೆಗಳನ್ನು ಪಟ್ಟಿ ಮಾಡುವರು.<br>• ಎರಡೂ ಪಟ್ಟಿಗಳನ್ನು ಹೋಲಿಸಿ ಕಂಡುಬಂದ ಅಂಶಗಳನ್ನು ತಿಳಿಯುವರು. | |
| 4. ಸಸ್ಯಗಳು | | ➢ **ಸಸ್ಯದ ಮುಖ್ಯ ಭಾಗಗಳನ್ನು ಪರಿಚಯ ಮಾಡಿಕೊಳ್ಳುವರು.**<br>• ಚಿತ್ರದ ಪ್ರಾತ್ಯಕ್ಷಿಕೆಯ ಮೂಲಕ ಸಸ್ಯದ ಭಾಗಗಳನ್ನು ಗುರುತಿಸುವರು.<br>• ಸಸ್ಯದ ಚಿತ್ರ ಬರೆದು ಬಣ್ಣ ತುಂಬುವರು. | ➢ **ವಿವಿಧ ರೀತಿಯ ಎಲೆಗಳನ್ನು ಸಂಗ್ರಹಿಸಿ, ಅವುಗಳ ಆಕಾರ, ಬಣ್ಣ, ರಚನೆ, ವಾಸನೆಯ ಬಗ್ಗೆ ಚರ್ಚಿಸುವರು. ಕೆಲವು ಋತುಗಳಲ್ಲಿ ಎಲೆಗಳು ಉದುರುವುದನ್ನು ಗಮನಿಸುವರು.**<br>• ತಾನು ಸಂಗ್ರಹಿಸಿದ ಎಲೆಗಳನ್ನು ಚಾರ್ಟ್‌ನಲ್ಲಿ ಅಂಟಿಸಿ, ಆ ಎಲೆಗಳ ಹೆಸರು, ಬಣ್ಣ, ಆಕಾರ, ವಾಸನೆಯ ಬಗ್ಗೆ ಬರೆದು, ಚಾರ್ಟ್ ಪ್ರದರ್ಶಿಸುವರು.<br>• ಎಲೆಯ ಚಿತ್ರ ಬರೆದು ಬಣ್ಣ ತುಂಬುವರು.<br>• ತಾನು ಗಮನಿಸಿದ 10 ಮರಗಳನ್ನು ಪಟ್ಟಿಮಾಡಿ, ಅದರಲ್ಲಿ ಎಲೆ ಉದುರುವ ಮರಗಳಿಗೆ ಗುರುತು ಹಾಕುವರು. | ➢ **ಸಸ್ಯದ ಭಾಗಗಳ ಕಾರ್ಯಗಳನ್ನು ಅರಿಯುವರು.**<br>• ಬೇರು, ಕಾಂಡ, ಎಲೆಗಳ ಕಾರ್ಯಗಳನ್ನು ವಿವರಿಸುವರು.<br>• ಯಾವುದಾದರೂ ಒಂದು ಪ್ರಯೋಗದ ಮೂಲಕ ಯಾವುದೇ ಒಂದು ಭಾಗದ ಒಂದು ಕರ‍್ಯವನ್ನು ತೋರಿಸುವರು.<br>• ಎಲೆಯಲ್ಲಿ ಅಹಾರ ತಯಾರಿಕೆಯ ಕ್ರಮವನ್ನು ಚಿತ್ರದ ಮೂಲಕ ತೋರಿಸುವರು. |

| | | | | |
|---|---|---|---|---|
| | | | | ➢ **ಕೆಲವು ಸಸ್ಯದ ಬೇರುಗಳು ಆಹಾರವಾಗಿ ಮಾರ್ಪಾಟು ಹೊಂದಿರುವ ಬಗ್ಗೆ ಗಮನಿಸುವರು.** |
| | | | • ಈ ಮರಗಳ ಎಲೆಗಳು ಯಾವ ಋತುವಿನಲ್ಲಿ (ಕಾಲದಲ್ಲಿ) ಉದುರುತ್ತವೆ ಎಂಬುದನ್ನು ಬರೆಯುವರು. | • ಬೇರಿನ ಕಾರ್ಯಗಳನ್ನು ವಿವರಿಸುವರು. |
| | | | | • ತಾನು ಬಳಸುವ, ಬೇರಿನಿಂದ ದೊರಕುವ 5 ಆಹಾರ ಪದಾರ್ಥಗಳನ್ನು ಪಟ್ಟಿಮಾಡುವರು. |
| | | | ➢ **ಉದುರುದ ಎಲೆಗಳನ್ನು ಬಳಸಿ ಸಾವಯವ ಗೊಬ್ಬರ ತಯಾರಿಸುವ ವಿಧಾನ ಕಲಿಯುವರು.** | • ಸೊಪ್ಪಿನ ಸಸ್ಯ ಮತ್ತು ಮೂಲಂಗಿ ಸಸ್ಯ ಎರಡನ್ನೂ ಹೋಲಿಸಿ, ಸಸ್ಯದ ಯಾವ ಭಾಗಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ ಎಂದು ಹೇಳುವರು. ಕಾರಣಗಳನ್ನು ನೀಡುವರು |
| | | | • ಉದುರಿದ ಎಲೆಗಳಿಂದ ಸಾವಯವ ಗೊಬ್ಬರ ತಯಾರಿಸುವ ವಿಧಾನವನ್ನು ಬರೆಯುವರು. | |
| | | | • ಪ್ರಾತ್ಯಕ್ಷಿಕೆಯ ಮೂಲಕ ಸಾವಯವ ಗೊಬ್ಬರ ತಯಾರಿಸುವ ವಿಧಾನವನ್ನು ತೋರಿಸುವರು. | ➢ **ವಿವಿಧ ರೀತಿಯ ಹೂಗಳನ್ನು ಸಂಗ್ರಹಿಸಿ ಅವುಗಳ ಬಣ್ಣ, ದಳ, ವಾಸನೆಯ ಬಗ್ಗೆ ಚರ್ಚಿಸುವರು. ಕೆಲವು ಋತುಗಳಲ್ಲಿ ಹೂ ಅರಳುವುದನ್ನು ಗಮನಿಸುವರು** |
| | | | ➢ **ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಎಲೆಗಳನ್ನು ಗುರುತಿಸುವರು.** | • ತಾನು ಸಂಗ್ರಹಿಸಿದ ಹೂವನ್ನು ಚಾರ್ಟ್‌ನಲ್ಲಿ ಅಂಟಿಸಿ ಹೂವಿನ ಹೆಸರು, ಬಣ್ಣ, ಆಕಾರ, ವಾಸನೆಯ ಬಗ್ಗೆ ಬರೆದು ಚಾರ್ಟ್ ಪ್ರದರ್ಶಿಸುವರು |
| | | | • ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಎಲೆಗಳನ್ನು ಗುರುತಿಸುವರು. | • ತಾನು ನೋಡಿರುವ ಬಳಸುವ 10 ಹೂಗಳ ಹೆಸರನ್ನು ಪಟ್ಟಿಮಾಡಿ, ಯಾವ ಹೂವು ಯಾವ ಕಾಲದಲ್ಲಿ ಹೆಚ್ಚಾಗಿ ಅರಳುತ್ತದೆ ಎಂಬುವುದನ್ನು ಗುರುತಿಸುವರು |

| | | | | | |
|---|---|---|---|---|---|
| | | | | | • ಹೂವಿನ ಅಂದವಾದ ಚಿತ್ರ ಬರೆದು ಬಣ್ಣ ತುಂಬುವರು.<br><br>➢ ದಿನನಿತ್ಯದಲ್ಲಿ ಹೂವಿನ ಬಳಕೆಯನ್ನು ಗುರುತಿಸುವರು.<br><br>• ದಿನನಿತ್ಯ ಬಳಕೆಯಲ್ಲಿ ಹೂವನ್ನು ಯಾವ ಯಾವ ಕಾರ್ಯಗಳಿಗೆ ಬಳಸುತ್ತೇವೆ ಎಂಬುದನ್ನು ಹೇಳುವರು.<br><br>➢ ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಹೂಗಳನ್ನು ಗುರುತಿಸುವರು.<br><br>• ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಹೂಗಳನ್ನು ಗುರುತಿಸುವರು.<br><br>➢ ಹೂ ಮಾರುವವರು ಬಳಸುವ ಅನೌಪಚಾರಿಕ ಅಳತೆಗಳನ್ನು ತಿಳಿಯುವರು. ಹೂ ಮಾರಾಟದ ಬೆಲೆಗಳನ್ನು ತಿಳಿಯುವರು.<br><br>• ತಮ್ಮ ಪ್ರದೇಶದಲ್ಲಿ ಹೂ ಮಾರುವವರು ಬಳಸುವ ಅನೌಪಚಾರಿಕ ಅಳತೆಗಳನ್ನು ಹೆಸರಿಸುವರು.<br><br>• ಅಳತೆಗಳನ್ನು ಮಾಪನಮಾಡಿ ತೋರಿಸುವರು. |

| | | | | |
|---|---|---|---|---|
| | | | | • ವಿವಿಧ ಹೂವಿನ ಮಾರಾಟದ ಬೆಲೆಗಳನ್ನು ಹೇಳುವರು. |
| **ವಿಷಯ : ಆಹಾರ** | | | | |
| | **➢ ಸ್ಥಳೀಯವಾಗಿ ದೊರೆಯುವ ಆಹಾರದ ಬಗ್ಗೆ ತಿಳಿಯುವರು ಮತ್ತು ಆಹಾರ ವಸ್ತುಗಳನ್ನು ಗುರುತಿಸುವರು.**<br><br>• ಚಿತ್ರಗಳ ಮೂಲಕ ತಾನು ಸೇವಿಸುವ ಆಹಾರವನ್ನು ಗುರುತಿಸುವರು.<br><br>• ಚಿತ್ರಗಳ ಮೂಲಕ ವಿವಿಧ ಆಹಾರ ವಸ್ತುಗಳನ್ನು ಗುರುತಿಸುವರು. | **➢ ಸಸ್ಯ ಮತ್ತು ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳನ್ನು ಗುರುತಿಸುವರು.**<br><br>• ತಾನು ಸೇವಿಸುವ ಆಹಾರ ಪದಾರ್ಥಗಳ ಹೆಸರುಗಳನ್ನು ಹೇಳುವರು.<br><br>• ಪಟ್ಟಿಯಲ್ಲಿ ಕೊಟ್ಟಿರುವ ಆಹಾರ ಪದಾರ್ಥಗಳಲ್ಲಿ ಸಸ್ಯಗಳಿಂದ ಮತ್ತು ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳಾಗಿ ವಿಂಗಡಿಸುವರು.<br><br>**➢ ಹಸಿಯಾಗಿ ಹಾಗೂ ಬೇಯಿಸಿ ತಿನ್ನುವ ಆಹಾರ ಪದಾರ್ಥಗಳನ್ನು ಗುರುತಿಸುವರು.**<br><br>• ಚಿತ್ರಗಳ ಮೂಲಕ ತಾನು ಹಸಿಯಾಗಿ ಮತ್ತು ಬೇಯಿಸಿ ತಿನ್ನುವ ಆಹಾರ ಪದಾರ್ಥಗಳನ್ನು ಗುರುತಿಸುವರು. | **➢ ಸಸ್ಯಜನ್ಯ ಮತ್ತು ಪ್ರಾಣಿಜನ್ಯ ಆಹಾರವನ್ನು ಪಟ್ಟಿಮಾಡುವರು.**<br><br>• ಸಸ್ಯ ಮತ್ತು ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳನ್ನು ಪಟ್ಟಿಮಾಡುವರು. | **➢ ಸಮತೋಲನ ಆಹಾರವನ್ನು ವಿವರಿಸುವರು.**<br><br>• ಸಮತೋಲನ ಆಹಾರ ಎಂದರೇನು ಎಂಬುದನ್ನು ವಿವರಿಸುವರು.<br><br>**➢ ವಿವಿಧ ಪೋಷಕಾಂಶಗಳ ವರ್ಗೀಕರಣ ಮಾಡುವರು ಮತ್ತು ಅವುಗಳ ಅವಶ್ಯಕತೆಯನ್ನು ಅರಿಯುವರು.**<br><br>• ವಿವಿಧ ಪೋಷಕಾಂಶಗಳನ್ನು ಗುರುತಿಸಿ, ಅವುಗಳಿಗೆ ಉದಾಹರಣೆ ನೀಡುವರು.<br><br>• ಕೊಟ್ಟಿರುವ ಆಹಾರ ಪದಾರ್ಥಗಳ ಹೆಸರುಗಳನ್ನು ಪೋಷಕಾಂಶಗಳ ಆಧಾರದ ಮೇಲೆ ವರ್ಗೀಕರಿಸುವರು. |

| | | | | |
|---|---|---|---|---|
| | | | ➢ **ಆಹಾರವನ್ನು ಶುದ್ಧವಾಗಿಡುವ ವಿಧಾನಗಳನ್ನು ಅರಿಯುವರು.**<br>• ಆಹಾರ ತಯಾರಿಸುವಾಗ ಮತ್ತು ನಂತರ ಅನುಸರಿಸಬೇಕಾದ ಕ್ರಮಗಳನ್ನು ಪಟ್ಟಿಮಾಡುವರು.<br>➢ **ಉತ್ತಮ ಆಹಾರ ಅಭ್ಯಾಸಗಳನ್ನು ಅರಿತು ಅನುಸರಿಸುವರು.**<br>• ಉತ್ತಮ ಆಹಾರ ಅಭ್ಯಾಸಗಳನ್ನು ಪಟ್ಟಿಮಾಡುವರು.<br>• ಅವುಗಳಲ್ಲಿ ತಾನು ಅನುಸರಿಸುತ್ತಿರುವ ಕ್ರಮಗಳನ್ನು ಗುರುತಿಸುವರು. | • ಪ್ರತಿ ಪೋಷಕಾಂಶದಿಂದ ದೇಹಕ್ಕೆ ಆಗುವ ಪ್ರಯೋಜನಗಳನ್ನು ಗುರುತಿಸುವರು.<br>• ಪೋಷಕಾಂಶದ ಕೊರತೆಯಿಂದ ಬರುವ ರೋಗಗಳ ಬಗ್ಗೆ ಚಿತ್ರ ಸಹಿತ ಚಾರ್ಟ ತಯಾರಿಸುವರು.<br>➢ **ನಾವು ಆಹಾರವನ್ನು ಎಲ್ಲಿಂದ ಮತ್ತು ಹೇಗೆ ಪಡೆಯುತ್ತೇವೆ ಎಂಬುದನ್ನು ವಿವರಿಸುವರು.**<br>• ಆಹಾರ ಸಾಗಿ ಬಂದ ದಾರಿಯನ್ನು (ವಿವಿಧ ಹಂತಗಳು) ಸರಳ ನಕ್ಷೆಯ ಮೂಲಕ ತೋರಿಸುವರು. |
| | | | ➢ **ಆಹಾರ ತಯಾರಿಕೆಯಲ್ಲಿ ಕುಟುಂಬದ ಸದಸ್ಯರ ಪಾತ್ರವನ್ನು ಗುರುತಿಸುವರು.** | ➢ **ಸಾಮೂಹಿಕ ಭೋಜನ ಮಾಡುವ ಸಂದರ್ಭಗಳನ್ನು ಗುರುತಿಸುವರು. ಅನುಸರಿಸಬೇಕಾದ ಕ್ರಮಗಳನ್ನು ರೂಢಿಸಿಕೊಳ್ಳುವರು.** |

| | | | | |
|---|---|---|---|---|
| 5. ಆಹಾರ | | | • ತಮ್ಮ ಮನೆಯಲ್ಲಿ ಆಹಾರ ತಯಾರಿಕೆಯಲ್ಲಿ ಭಾಗವಹಿಸುವ ಕುಟುಂಬದ ಸದಸ್ಯರನ್ನು ಹೆಸರಿಸಿ, ಅವರು ಮಾಡುವ ಕೆಲಸವನ್ನು<br>• ಆಹಾರ ತಯಾರಿಕೆಯಲ್ಲಿ ತಾನು ಹೇಗೆ ನೆರವಾಗುವೆ ಎಂಬುದನ್ನು ತಿಳಿಸುವರು.<br>➢ **ಲಿಂಗ, ವಯಸ್ಸು ಮತ್ತು ದೈಹಿಕ ಚಟುವಟಿಕೆಗಳಿಗೆ ಅನುಗುಣವಾಗಿ ಸೇವಿಸುವ ಆಹಾರದ ಪ್ರಮಾಣವನ್ನು ಗುರುತಿಸುವರು**<br>• ತನ್ನ ಆಹಾರ ಸೇವನೆಗೂ ತನ್ನ ಕುಟುಂಬದ ಇತರ ಸದಸ್ಯರ ಆಹಾರ ಸೇವನೆಗೂ ಇರುವ ವ್ಯತ್ಯಾಸ (ಪ್ರಮಾಣದಲ್ಲಿ, ಆಹಾರದ ವಿಧ) | • ತಾನು ಭಾಗವಹಿಸಿದ ಯಾವುದಾದರೂ ಒಂದು ಸಾಮೂಹಿಕ ಭೋಜನ ಸಂದರ್ಭವನ್ನು ಕುರಿತು ಟಿಪ್ಪಣಿ ಬರೆಯುವರು.<br>• ತನ್ನ ಸ್ನೇಹಿತರ ಟಿಪ್ಪಣಿಯೊಂದಿಗೆ ತನ್ನ ಟಿಪ್ಪಣಿಯನ್ನು ಹೋಲಿಸಿ, ಗುಂಪು ಚರ್ಚೆಯ ಮೂಲಕ ಸಾಂಸ್ಕೃತಿಕ ವೈವಿಧ್ಯದ ಅಂಶಗಳನ್ನು |
| | | | ➢ **ಆಹಾರದಲ್ಲಿನ ವೈವಿಧ್ಯತೆಯನ್ನು ತಿಳಿಯುವರು. (ತಮ್ಮ ಜಿಲ್ಲೆಗಳಲ್ಲಿನ ವೈವಿಧ್ಯಮಯ ಆಹಾರಗಳ ಪರಿಚಯ)**<br>• ಹತ್ತು ಜನ ಸ್ನೇಹಿತರು ಬಳಸುವ ಆಹಾರವನ್ನು ಪಟ್ಟಿ ಮಾಡುವರು. ಈ ಪಟ್ಟಿಯನ್ನು ತನ್ನ ಆಹಾರ ಕ್ರಮದೊಂದಿಗೆ<br>• ತನ್ನ ಜಿಲ್ಲೆಯ ವಿಶೇಷ ಆಹಾರ ಪದಾರ್ಥವನ್ನು ವಿವರಿಸುವರು. | ➢ **ಆಹಾರ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಮೆಚ್ಚುವರು. ತಮ್ಮ ಜಿಲ್ಲೆಯ ಹಾಗೂ ಸುತ್ತಲಿನ ಜಿಲ್ಲೆಗಳ ಸಾಂಸ್ಕೃತಿಕ ವೈವಿಧ್ಯತೆಯನ್ನು ತಿಳಿಯುವರು.** |
| | ➢ **ತಾನು ಸೇವಿಸುವ ಆಹಾರವನ್ನು ಗುರುತಿಸುವರು.** | ➢ **ಕುಟುಂಬದಲ್ಲಿನ ವಿವಿಧ ಆಹಾರ ಅಭ್ಯಾಸಗಳನ್ನು ವಿವರಿಸುವರು.** | | |

| | | | | |
|---|---|---|---|---|
| | • ತಾನು ಆಹಾರ ಸೇವಿಸುವ ಆಹಾರ ಪದಾರ್ಥಗಳನ್ನು ಹೇಳುವರು.<br><br>➢ **ಆಹಾರದ ಅವಶ್ಯಕತೆಗಳನ್ನು ತಿಳಿಯುವರು.**<br><br>• ನಮಗೆ ಆಹಾರ ಏಕೆ ಬೇಕು ಎಂಬುದನ್ನು ಹೇಳುವರು. | • ತನ್ನ ಕುಟುಂಬದಲ್ಲಿ ಸೇವಿಸುವ ಆಹಾರವನ್ನು ಹೇಳುವರು. | | |
| | | ➢ **ಅಡುಗೆ ಮಾಡಲು ಬಳಸುವ ವಿವಿಧ ಪಾತ್ರೆಗಳನ್ನು ಹೆಸರಿಸುವರು.**<br><br>• ತನ್ನ ಕುಟುಂಬದಲ್ಲಿ ಬಳಸುವ ವಿವಿಧ ಪಾತ್ರೆಗಳನ್ನು ಹೆಸರಿಸುವರು. | ➢ **ಆಹಾರ ತಯಾರಿಕೆಯಲ್ಲಿ ಬಳಸುವ ವಿವಿಧ ಪರಿಕರಗಳು ಮತ್ತು ಇಂಧನಗಳನ್ನು ಗುರುತಿಸುವರು.**<br><br>• ತನ್ನ ಅಡಿಗೆ ಮನೆಯಲ್ಲಿ ಕಂಡುಬರುವ ಪರಿಕರಗಳನ್ನು ಪಟ್ಟಿಮಾಡುವರು.<br><br>• ಅಡುಗೆ ಮಾಡಲು ಬಳಸುವ ವಿವಿಧ ಇಂಧನಗಳನ್ನು ಬರೆದು ತಮ್ಮ ಮನೆಯಲ್ಲಿ ಬಳಸುವ ಇಂಧನಗಳನ್ನು ಚಿಹ್ನೆ ಮೂಲಕ ಗುರುತಿಸುವರು. | |
| | | ➢ **ಪ್ರಾಣಿಗಳ ಆಹಾರವನ್ನು ಗುರುತಿಸುವರು.**<br><br>• ಚಿತ್ರದಲ್ಲಿ ಕೊಟ್ಟಿರುವ ಪ್ರಾಣಿಗಳನ್ನು ಅವುಗಳ ಆಹಾರದೊಂದಿಗೆ ಹೊಂದಿಸುವರು. | ➢ **ಸಾಕುಪ್ರಾಣಿ ಮತ್ತು ಕಾಡುಪ್ರಾಣಿಗಳ ಆಹಾರವನ್ನು ಗುರುತಿಸುವರು.**<br><br>• ಸಾಕುಪ್ರಾಣಿಗಳ ಹೆಸರುಗಳನ್ನು ಪಟ್ಟಿಮಾಡಿ, ಅವುಗಳ ಆಹಾರಗಳನ್ನು ಬರೆಯುವರು. | ➢ **ಪ್ರಾಣಿ ಪಕ್ಷಿಗಳ ಆಹಾರ ಅಭ್ಯಾಸಗಳ ಬಗ್ಗೆ ಚರ್ಚಿಸುವರು. ಇವುಗಳ ಆಹಾರ ಕ್ರಮಕ್ಕೆ ಮತ್ತು ಕೊಕ್ಕು, ಹಲ್ಲುಗಳಿಗಿರುವ ಸಂಬಂಧವನ್ನು ಅರಿಯುವರು.**<br><br>• ತಮಗೆ ತಿಳಿದಿರುವ 5 ಪ್ರಾಣಿಗಳು, ಎರಡು ಪಕ್ಷಿಗಳ ಆಹಾರ ಕ್ರಮವನ್ನು ವಿವರಿಸುವರು. |

| | | | | |
|---|---|---|---|---|
| | | | • ಕಾಡುಪ್ರಾಣಿಗಳ ಹೆಸರನ್ನು ಪಟ್ಟಿಮಾಡಿ ಅವುಗಳ ಆಹಾರಗಳನ್ನು ಬರೆಯುವರು.<br><br>• ಪ್ರಾಣಿಗಳಿಗೂ ಆಹಾರದ ಅವಶ್ಯಕತೆ ಇದೆ ಎಂಬುದನ್ನು ವಿವರಿಸುವರು. | • ಚಿತ್ರದ ಸಹಾಯದಿಂದ ಪಕ್ಷಿಗಳ ಆಹಾರ ಅಭ್ಯಾಸ / ಆಹಾರ ಪಡೆಯುವ ಕ್ರಮವನ್ನು ವರ್ಣಿಸುವರು. |
| **ವಿಷಯ : ಕೆಲಸ ಮತ್ತು ಶಕ್ತಿ** | | | | |
| ೬. ಕೆಲಸ ಮತ್ತು ಶಕ್ತಿ | | | ➢ **ಕೆಲಸಮಾಡಲು ಶಕ್ತಿಬೇಕು ಎಂಬುದನ್ನು ಗುರುತಿಸುವರು ಮತ್ತು ವಿವಿಧ ಶಕ್ತಿಯ ಮೂಲಗಳನ್ನು ತಿಳಿಯುವರು.**<br><br>• ಚಿತ್ರಗಳ ಸಹಾಯದಿಂದ ಕೆಲಸಮಾಡಲು ಶಕ್ತಿಯ ಅವಶ್ಯಕತೆಯಿದೆ ಎಂಬುದನ್ನು ತಿಳಿಸುವರು.<br><br>• ಚಿತ್ರಗ:ಳ ಸಹಾಯದಿಂದ ವಿವಿಧ ಶಕ್ತಿಯ ಮೂಲಗಳನ್ನು ಗುರುತಿಸುವರು. | ➢ **ಶಕ್ತಿಯ ಮೂಲಗಳ ಬಗ್ಗೆ ತಿಳಿಯುವರು.**<br><br>• ಶಕ್ತಿಯ ಮೂಲಗಳ ಪಟ್ಟಿ ಮಾಡುವರು. ಅವುಗಳಲ್ಲಿ ತಾವು ಬಳಸುವ ಶಕ್ತಿಯ ಮೂಲಗಳನ್ನು ಗುರುತಿಸುವರು.<br><br>➢ **ಶಕ್ತಿ ಸಂರಕ್ಷಣೆಯ ಅವಶ್ಯಕತೆಯನ್ನು ಗುರುತಿಸುವರು.**<br><br>• ಶಕ್ತಿ ಸಂರಕ್ಷಣೆಯ ಅವಶ್ಯಕತೆಯ ಕಾರಣಗಳನ್ನು ಗುರುತಿಸುವರು.<br><br>• ಶಕ್ತಿಯ ಸಂರಕ್ಷಣೆಯ ಕ್ರಮಗಳನ್ನು ಪಟ್ಟಿಮಾಡಿ, ತಾನು ಅನುಸರಿಸುವ ಕ್ರಮಗಳನ್ನು ಗುರುತಿಸುವರು. |

| | | | | |
|---|---|---|---|---|
| **ವಿಷಯ : ವಸ್ತುಗಳು ಮತ್ತು ಗುಣಗಳು** | | | | |
| 7. ವಸ್ತುಗಳು ಮತ್ತು ಗುಣಗಳು | | | ➢ **ವಸ್ತುಗಳ ಗುಣಗಳನ್ನು ತಿಳಿಯುವರು.**<br>• ವಸ್ತುಗಳನ್ನು ಹೊಳೆಯುವ, ಹೊಳೆಯದ, ಭಾರ,ಹಗುರ, ಮುಳುಗುವ, ತೇಲುವ, ಕರಗುವ, ಕರಗದ, ಪಾರದರ್ಶಕ, ಅಪಾರದರ್ಶಕ ಎಂದು ವರ್ಗೀಕರಿಸುವರು.<br>➢ **ವಸ್ತುಗಳ ಸ್ಥಿತಿಗಳನ್ನು ಅರಿಯುವರು.**<br>• ಘನ, ದ್ರವ, ಅನಿಲವಸ್ತುಗಳಿಗೆ 2 ಉದಾಹರಣೆ ಕೊಡುವರು. | ➢ **ಘನ, ದ್ರವ, ಅನಿಲವಸ್ತುಗಳಲ್ಲಿನ ಕಣಗಳ ಜೋಡಣೆಯನ್ನು ತಿಳಿಯುವರು.**<br>• ಚಿತ್ರದ ಮೂಲಕ ಘನ, ದ್ರವ, ಅನಿಲದ ಸ್ಥಿತಿಗಳ ಕಣಜೋಡಣೆಯನ್ನು ಸೂಚಿಸುವರು.<br>• ಉದಾಹರಣೆಗಳನ್ನು ಕೊಡುವರು.<br>➢ **ನೀರು ಅನೇಕ ವಸ್ತುಗಳನ್ನು ಕರಗಿಸಬಲ್ಲುದು ಎಂದು ತಿಳಿಯುವರು.**<br>• ನೀರಿನಲ್ಲಿ ಸಂಪೂರ್ಣವಾಗಿ ಕರಗುವ 2 ವಸ್ತುಗಳನ್ನು ಹೆಸರಿಸಿ, ಪ್ರಯೋಗದ ಮೂಲಕ ತೋರಿಸುವರು. |
| **ವಿಷಯ : ನೀರು** | | | | |
| | ➢ **ನಿತ್ಯ ಜೀವನದಲ್ಲಿ ನೀರಿನ ಉಪಯೋಗ ತಿಳಿಯುವರು.** | ➢ **ಸ್ಥಳೀಯ ನೀರಿನ ಆಕರಗಳನ್ನು ಗುರುತಿಸುವರು.** | ➢ **ನೀರಿನ ವಿವಿಧ ಆಕರಗಳನ್ನು ಮತ್ತು ವಿವಿಧ ಉಪಯೋಗಗಳನ್ನು ಗುರುತಿಸುವರು.** | ➢ **ನೀರಿನ ಗುಣಲಕ್ಷಣಗಳನ್ನು ಸರಳ ಪ್ರಯೋಗದಿಂದ ಅರಿಯುವರು.** |

| | | | | |
|---|---|---|---|---|
| | • ನೀರನ್ನು ತಾನು ಯಾವ ಯಾವ ಕೆಲಸಗಳಿಗೆ ಬಳಸುವೆ? ಎಂದು ಹೇಳುವರು.<br>• ನೀರನ್ನು ತಮ್ಮ ಮನೆಯಲ್ಲಿ ಯಾವ ಯಾವ ಕೆಲಸಗಳಿಗೆ ಬಳಸುತ್ತಾರೆ ಎಂದು ಹೇಳುವರು. | • ಸ್ಥಳೀಯ ನೀರಿನ ಆಕರಗಳನ್ನು ಗುರುತಿಸುವರು.<br>• ತನ್ನ ಮನೆಯಲ್ಲಿ ಬಳಸುವ ನೀರನ್ನು ಎಲ್ಲಿಂದ ತರುತ್ತಾರೆ ಎಂಬುದನ್ನು ಗುರುತಿಸುವರು.<br>• ತನ್ನ ಊರಿನಲ್ಲಿ ನೀರು ಎಲ್ಲೆಲ್ಲಿ ದೊರಕುತ್ತದೆ ಎಂದು ಹೇಳುವರು. | • ನೀರಿನ ವಿವಿಧ ಆಕರಗಳನ್ನು ಬರೆಯುವರು.<br>• ಮನೆಯ ಕೆಲಸವನ್ನು ಹೊರತು ಪಡಿಸಿ ವಿವಿಧ ಕೆಲಸಗಳಿಗೆ ನೀರಿನ ಉಪಯೋಗಗಳನ್ನು ಪಟ್ಟಿಮಾಡುವರು.<br>➢ **ಮನೆಯಲ್ಲಿ ಬಳಸುವ ನೀರನ್ನು ಎಷ್ಟು ದೂರದಿಂದ ತರುವರು ಎಂದು ವಿವರಿಸುವರು.**<br>• ಮನೆಯಲ್ಲಿ ಬಳಸುವ ನೀರನ್ನು ತರುವ ಆಕರದ ದೂರವನ್ನು ಅನೌಪಚಾರಿಕ ಅಳತೆ ಗಳಿಂದ ತಿಳಿಸುವರು.<br>• ನೀರನ್ನು ಪಡೆಯುವ ವಿಧಾನವನ್ನು ವಿವರಿಸುವರು. | • ಬಣ್ಣ, ರುಚಿ, ಆಕಾರ, ಸ್ಥಿತಿಗಳನ್ನು ಗುರುತಿಸುವರು.<br>• ಯಾವುದಾದರೂ ಒಂದು ಗುಣವನ್ನು ಒಂದು ಪ್ರಯೋಗದ ಮೂಲಕ ನಿರೂಪಿಸುವರು.<br>➢ **ಕುಡಿಯಲು ಯೋಗ್ಯವಾದ ಮತ್ತು ಕುಡಿಯಲು ಯೋಗ್ಯವಲ್ಲದ ನೀರಿನ ಮೂಲಗಳನ್ನು ವರ್ಗೀಕರಿಸುವರು.**<br>• ನೀರಿನ ವಿವಿಧ ಮೂಲಗಳನ್ನು ಬರೆಯುವರು. ಆ ಮೂಲಗಳಲ್ಲಿ ಕುಡಿಯಲು ಯೋಗ್ಯವಾದ ಮತ್ತು ಯೋಗ್ಯವಲ್ಲದ ಮೂಲಗಳೆಂದು ವರ್ಗೀಕರಿಸುವರು.<br>• ಕಾರಣಗಳ ಮೂಲಕ ವರ್ಗೀಕರಣವನ್ನು ಸಮರ್ಥಿಸುವರು. |
| | | ➢ **ಕುಡಿಯಲು ಶುದ್ಧ ನೀರು ಬೇಕು ಎಂಬುದನ್ನು ಅರಿಯುವರು.**<br>• ಶುದ್ಧ ನೀರನ್ನು ಏಕೆ ಕುಡಿಯಬೇಕು ಎಂಬುದಕ್ಕೆ ಕಾರಣಗಳನ್ನು ನೀಡುವರು. | ➢ **ನೀರಿನ ಬಳಕೆ ಮತ್ತು ಸಂಗ್ರಹಣೆಯಲ್ಲಿ ಅನುಸರಿಸುವ ಸುರಕ್ಷಿತ ವಿಧಾನಗಳನ್ನು ಅರಿಯುವರು ಮತ್ತು ಅನುಸರಿಸುವರು.**<br>• ನೀರನ್ನು ಹೇಗೆ ಬಳಸಬೇಕು ಎಂಬುವುದನ್ನು ವಿವರಿಸುವರು.<br>• ನೀರಿನ ಸಂಗ್ರಹಣೆ, ಸುರಕ್ಷತೆಯ ವಿಧಾನಗಳನ್ನು ಅಭಿನಯಿಸಿ ತೋರಿಸುವರು. | ➢ **ನೀರಿನ ಮಾಲಿನ್ಯದ ಕಾರಣ ಮತ್ತು ದುಷ್ಪರಿಣಾಮಗಳನ್ನು ಅರಿಯುವರು.**<br>• ನೀರು ಏಕೆ ಕಲುಷಿತಗೊಳ್ಳುತ್ತದೆ ಎಂಬುದಕ್ಕೆ ಕಾರಣಗಳನ್ನು ಪಟ್ಟಿಮಾಡುವರು.<br>• ತನ್ನ ಊರಿನ ನೀರಿನ ಮೂಲಗಳಲ್ಲಿ ನೀರು ಕಲುಷಿತಗೊಂಡಿದ್ದರೆ ಅದಕ್ಕೆ ಕಾರಣಗಳನ್ನು ಗುರುತಿಸುವರು. |

| | | | | |
|---|---|---|---|---|
| | | | • ಪ್ರಯೋಗದ ಮೂಲಕ ನೀರಿನ ಶುದ್ಧೀಕರಣವನ್ನು ಪ್ರದರ್ಶಿಸುವರು. | • ಕಲುಷಿತ ನೀರಿನಿಂದಾಗುವ ದುಷ್ಪರಿಣಾಮಗನ್ನು ಹೇಳುವರು.<br>➢ **ನೀರಿನಿಂದ ಹರಡುವ ರೋಗಗಳನ್ನು ಪಟ್ಟಿ ಮಾಡುವರು.**<br>• ಕಲುಷಿತ ನೀರಿನಿಂದ ಉಂಟಾಗುವ ರೋಗಗಳನ್ನು ಪಟ್ಟಿಮಾಡುವರು.<br>• ಈ ಪಟ್ಟಿಯಲ್ಲಿರುವ ರೋಗಗಳು ಊರಿನಲ್ಲಿ (ಕುಟುಂಬ, ಶಾಲೆ, ನೆರೆಹೊರೆ)ಬಂದಿದ್ದರೆ ಗುರುತು ಹಾಕು. |
| | | | | ➢ **ನಿರ್ಜಲೀಕರಣದ ಕಾರಣಗಳು ಹಾಗೂ ಪುನರ್ಜಲೀಕರಣ ದ್ರಾವಣ ತಯಾರಿಕೆಯನ್ನು ಅರಿಯುವರು.**<br>• ನಿರ್ಜಲೀಕರಣ ಎಂದರೇನು? ಎಂಬುದನ್ನು ವ್ಯಾಖ್ಯಾನಿಸುವರು ಮತ್ತು ಕಾರಣಗಳನ್ನು ವಿವರಿಸುವರು.<br>• ನಿರ್ಜಲೀಕರಣವಾದ ಸಂದರ್ಭದಲ್ಲಿ ವ್ಯಕ್ತಿಗೆಮಾಡಬೇಕಾದ ಪ್ರಥಮ ಚಿಕಿತ್ಸೆಯನ್ನು ವಿವರಿಸುವರು.<br>• ಪುನರ್ಜಲೀಕರಣ ತಯಾರಿಸುವ ಪ್ರಾತ್ಯಕ್ಷತೆಯನ್ನು ಮಾಡುವರು. |

| | | | | |
|---|---|---|---|---|
| ೪. ನೀರು | | | | ➢ **ಜಲ ಚಕ್ರವನ್ನು ವಿವರಿಸುವರು.**<br><br>• ಜಲಚಕ್ರದ ಚಿತ್ರವನ್ನು ಬರೆದು ವಿವರಿಸುವರು.<br><br>• ನೀರಿನ ಆವಿಕರಣ ಮತ್ತು ಸಾಂದ್ರೀಕರಣದ ಕ್ರಿಯೆಗಳನ್ನು ಪ್ರಯೋಗದ ಮೂಲಕ ವಿವರಿಸುವರು.<br><br>➢ **ನೀರಿನ ಅಭಾವ ಮತ್ತು ನೀರಿನ ಅಪವ್ಯಯದಿಂದುಂಟಾಗುವ ಅಮಸ್ಯೆಗಳನ್ನು ಪಟ್ಟಿ ಮಾಡುವರು.**<br><br>• ನೀರಿನ ಅಭಾವದಿಂದ ಉಂಟಾಗುವ ಸಮಸ್ಯೆಗಳನ್ನು ಪಟ್ಟಿಮಾಡುವರು.<br><br>• ತನ್ನ ಮನೆ/ಶಾಲೆ/ಊರಿನಲ್ಲಿ ನೀರಿನ ಅಭಾವದಿಂದ ಉಂಟಾದ ಸಮಸ್ಯೆಗಳನ್ನು ಮೇಲಿನ ಪಟ್ಟಿಯಲ್ಲಿ ಗುರುತಿಸುವರು.<br><br>➢ **ನೀರಿನ ಮರು ಬಳಕೆ ಮತ್ತು ಮಳೆಕೊಯ್ಲಿನ ಮಹತ್ವವನ್ನು ಅರಿಯುವರು.** |

| | | | | |
|---|---|---|---|---|
| | | | | • ನೀರಿನ್ನು ಸಂರಕ್ಷಿಸಲು ತಾನು ಕೈಗೊಳ್ಳಬಹುದಾದ ಕ್ರಮಗಳನ್ನು ವಿವರಿಸುವರು.<br>• ಯಾವುದಾರೂ ಒಂದು ಕ್ರಮವನ್ನು ಚಟುವಟಿಕೆಯ ಮೂಲಕ ತೋರಿಸುವರು.<br>➢ ಚಿತ್ರ ಬರೆದು ಮಳೆಕೊಯ್ಲಿನ ಮಹತ್ವವನ್ನು ತಿಳಿಸುವರು. |
| | | ➢ **ಸಸ್ಯ ಮತ್ತು ಪ್ರಾಣಿಗಳಿಗೆ ನೀರಿನ ಅವಶ್ಯಕತೆ ಇದೆ ಎಂಬುದನ್ನು ಗುರುತಿಸುವರು.**<br>• ಸಸ್ಯ ಮತ್ತು ಪ್ರಾಣಿಗಳಿಗೆ ನೀರಿನ ಅವಶ್ಯಕತೆ ಇದೆ ಎಂಬುದನ್ನು ಉದಾಹರಣೆಯೊಂದಿಗೆ ಹೇಳುವರು. | ➢ **ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಪ್ರಾಣಿಗಳನ್ನು ಗುರುತಿಸುವರು.**<br>• ಜಲಚರ ಜೀವಿಗಳ ಹೆಸರನ್ನು ಪಟ್ಟಿ ಮಾಡುವರು.<br>• ಎರಡು ಜಲಚರಗಳ ಚಿತ್ರ ಬರೆಯುವರು.<br>• ಮಳೆಗೆ ಸಂಬಂಧಿಸಿದಂತೆ ಸಸ್ಯ ಮತ್ತು ಪ್ರಾಣಿಗಳ ಪ್ರತಿಕ್ರಿಯೆ ಗಮನಿಸುವರು.<br>➢ ಮಳೆಗೆ ಸಂಬಂದಿಸಿದಂತೆ ಸಸ್ಯ ಮತ್ತು ಪ್ರಾಣಿಗಳ ಪ್ರತಿಕ್ರಿಯೆಯನ್ನು ಅಭಿನಯದ ಮೂಲಕ ವ್ಯಕ್ತಪಡಿಸುವರು.(ಕನಿಷ್ಟ 1) | |

| | | | | |
|---|---|---|---|---|
| | | | ➢ನದಿ, ಮಳೆ ನೀರಿಗೆ ಸಂಬಂಧಿಸಿದ ಹಾಡು, ನೃತ್ಯ ಮುಂತಾದ ಸಾಂಸ್ಕೃತಿಕ ಅಭಿವ್ಯಕ್ತಿಗಳ ಮೂಲಕ ವಿಷಯವನ್ನು ವ್ಯಕ್ತಪಡಿಸುವರು.<br>• ನದಿ, ಮಳೆಗೆ ಸಂಬಂಧಿಸಿದ ಹಾಡನ್ನು ಹೇಳುವರು.<br>➢ಋತುಮಾನಕ್ಕೆ ತಕ್ಕಂತೆ ನೀರಿನ ಹರಿವಿನಲ್ಲಾಗುವ ಬದಲಾವಣೆಯನ್ನು ಗುರುತಿಸುವರು.<br>• ಚಿತ್ರಗಳ ಸಹಾಯದಿಂದ ವಿವಿಧ ಕಾಲಗಳಲ್ಲಿ ಉಂಟಾಗುವ ನೀರಿನ ಹರಿವಿನಲ್ಲಾಗುವ ಬದಲಾವಣೆಯನ್ನು ಗುರುತಿಸುವರು. | |
| | | | ➢**ನೀರನ್ನು ಸಂಗ್ರಹಿಸುವ ಪಾತ್ರೆ, ಗಾತ್ರ, ಆಕಾರ, ಮಾಡಲ್ಪಟ್ಟ ಸಾಮಗ್ರಿಯ ಬಗ್ಗೆ ಚರ್ಚಿಸುವರು.**<br>• ತಮ್ಮ ಮನೆಯಲ್ಲಿ ನೀರನ್ನು ಸಂಗ್ರಹಿಸಿಡುವ ಸಾಮಗ್ರಿಯ ಆಕಾರ, ಗಾತ್ರ ಮಾಡಲ್ಪಟ್ಟ ಸಾಮಗ್ರಿಗಳ ವಿವರದ ಕೋಷ್ಟಕ ತಯಾರಿಸುವರು. | ➢**ದಿನನಿತ್ಯ ಬಳಸುವ ನೀರನ್ನು ಅನೌಪಚಾರಿಕ ಅಳತೆಗಳ ಮೂಲಕ ಅಳೆಯುವರು.**<br>• ನೀರನ್ನು ಅನೌಪಚಾರಿಕ ಅಳತೆಗಳ ಮೂಲಕ ಅಳೆಯುವ ಕ್ರಮವನ್ನು ಪ್ರದರ್ಶಿಸುವರು.<br>• ಪ್ರತಿ ಕೆಲಸಕ್ಕೆ ತಾನು ಬಳಸುವ ನೀರಿನ ಪ್ರಮಾಣವನ್ನು ಅನೌಪಚಾರಿಕ ಅಳತೆಗಳ ಮೂಲಕ ಅಳೆದು, ದಾಖಲಿಸುವರು. |
| **ವಿಷಯ : ವಸತಿ** | | | | |

| | | | | |
|---|---|---|---|---|
| | ➢ **ತಮ್ಮ ಮನೆಯ ಪರಿಚಯ ಮಾಡಿಕೊಳ್ಳುವರು.**<br>• ತನ್ನ ಮನೆಗೆ ಎಷ್ಟು ಕಿಟಕಿ, ಬಾಗಿಲು ಇದೆ ಮತ್ತು ತನ್ನ ಮನೆ ಎಲ್ಲಿದೆ ಎಂಬುದನ್ನು ಹೇಳುವರು. | ➢ **ಸಾಮಾನ್ಯವಾಗಿ ಮನೆಯಲ್ಲಿರುವ ವಿವಿಧ ಭಾಗಗಳನ್ನು ಪರಿಚಯಮಾಡಿಕೊಳ್ಳುವರು.**<br>• ತನ್ನ ಮನೆಯ ವಿವಿಧ ಭಾಗಗಳನ್ನು ಹೆಸರಿಸುವರು.<br>• ಸಾಮಾನ್ಯವಾಗಿ ಮನೆಯಲ್ಲಿರುವ ವಿವಿಧ ಕೊಠಡಿಗಳನ್ನು ಹೆಸರಿಸುವರು.<br>• ಆ ಕೊಠಡಿಯ ಉಪಯೋಗ ಹೇಳುವರು. | ➢ **ವಿವಿಧ ರೀತಿಯ ಮನೆಗಳನ್ನು ಗುರುತಿಸುವರು.**<br>• ತಮ್ಮ ಊರಿನಲ್ಲಿರುವ ವಿವಿಧ ರೀತಿಯ ಮನೆಗಳನ್ನು ಹೆಸರಿಸುವರು. | ➢ **ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿನ ಮನೆಗಳಿಗಿರುವ ವ್ಯತ್ಯಾಸವನ್ನು ಕಂಡುಕೊಳ್ಳುವರು.**<br>• ಗ್ರಾಮ ಮತ್ತು ನಗರ ಪ್ರದೇಶದಲ್ಲಿನ ಮನೆಗಳಿಗಿರುವ ವ್ಯತ್ಯಾಸವನ್ನು ಬರೆಯುವರು. |
| | | | ➢ **ಮನೆ ಕಟ್ಟಲು ಉಪಯೋಗಿಸುವ ವಸ್ತುಗಳನ್ನು ಪರಿಚಯ ಮಾಡಿಕೊಳ್ಳುವರು.**<br>• ವಿವಿಧ ರೀತಿಯ ಮನೆಗಳನ್ನು ಕಟ್ಟಲು ಬಳಸುವ ವಿವಿಧ ರೀತಿಯ ವಸ್ತುಗಳ ಕೋಷ್ಟಕ ತಯಾರಿಸಿ ಪ್ರದರ್ಶಿಸುವರು. | ➢ **ಕಾಲದಿಂದ ಕಾಲಕ್ಕೆ ಮನೆಗಳ ನಿರ್ಮಾಣದಲ್ಲಿರುವ ವ್ಯತ್ಯಾಸವನ್ನು ಗುರುತಿಸುವರು.**<br>• ಚಿತ್ರಗಳ ಸಹಾಯದಿಂದ ಕಾಲದಿಂದ ಕಾಲಕ್ಕೆ ಮನೆಗಳ ನಿರ್ಮಾಣದಲ್ಲಿನ ವ್ಯತ್ಯಾಸವನ್ನು ಗುರುತಿಸುವರು. |
| | ➢ **ಮನೆಯನ್ನು ಆಧಾರವಾಗಿರಿಸಿಕೊಂಡು ಸ್ಥಳೀಯ ಪ್ರದೇಶದ ದೂರವನ್ನು, ಬಹಳ ಹತ್ತಿರ, ಹತ್ತಿರ, ದೂರ ಹೀಗೆ ಅಂದಾಜು ಮಾಡುವರು.**<br>• ಚಿತ್ರಗಳ ಸಹಾಯದಿಂದ ಮನೆಯ ಸುತ್ತಮುತ್ತಲಿನ ಸನ್ನಿವೇಶವನ್ನು ದೂರ, ಬಹಳ ದೂರ, ಹತ್ತಿರ, ಬಹಳ ಹತ್ತಿರ ಎಂದು ಗುರುತಿಸುವರು. | ➢ **ಹಿಂದೆ, ಮುಂದೆ, ಎಡ, ಬಲ ಪದ ಬಳಸಿ ಮನೆಯ ಸುತ್ತಮುತ್ತಲಿನ ಸನ್ನಿವೇಶವನ್ನು ಗುರುತಿಸುವರು.**<br>• ಚಿತ್ರಗಳ ಸಹಾಯದಿಂದ ಮನೆಯ ಸುತ್ತಮುತ್ತಲಿನ ಸನ್ನಿವೇಶವನ್ನು ಎಡ, ಬಲ, ಹಿಂದೆ, ಮುಂದೆ ಎಂದು ಗುರುತಿಸಿ ಹೇಳುವರು. | | ➢ **ಸ್ಥಳೀಯ ಗುರುತುಗಳಿಗೆ ಅನುಗುಣವಾಗಿ ದಿಕ್ಕನ್ನು ಸೂಚಿಸುವರು.**<br>• ಚಿತ್ರ/ಮಾದರಿಗಳ ಸಹಾಯದಿಂದ ಮನೆಯ ಸುತ್ತಮುತ್ತಲಿನ ಸನ್ನಿವೇಶವನ್ನು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಎಂದು ಗುರುತಿಸುವರು. |

| | | | | |
|---|---|---|---|---|
| | | | | ➢ **ನಕ್ಷೆ ಬಿಡಿಸುವ ಪ್ರಾಥಮಿಕ ಹಂತಗಳನ್ನು ಮತ್ತು ಸ್ಥಳವನ್ನು ಗುರುತಿಸಲು ವಿವಿಧ ಚಿಹ್ನೆಗಳನ್ನು ಬಳಸಿ ನಕ್ಷೆಯನ್ನು ರಚಿಸುವರು.**<br>• ಮನೆಯಿಂದ ಶಾಲೆಗೆ ಹೋಗುವ ಸರಳ ನಕ್ಷೆಯನ್ನು ಬಿಡಿಸುವರು.<br>• ಶಾಲೆಯ ನಕ್ಷೆಯನ್ನು ಬಿಡಿಸಿ ಅಲ್ಲಿರುವ ವಿವಿಧ ವಸ್ತುಗಳನ್ನು ಚಿಹ್ನೆ ಬಳಸಿ ಸೂಚಿಸುವರು. |
| ೧. ವಸತಿ | | ➢ **ಮನೆಯಲ್ಲಿ ಉಂಟಾಗುವ ವಿವಿಧ ಕಸವನ್ನು ಗುರುತಿಸುವರು. ಇದರ ಸರಯಾದ ವಿಲೇವಾರಿ ಕ್ರಮವನ್ನು ಅರಿಯುವರು.**<br>• ತನ್ನ ಮನೆಯಲ್ಲಿ ಉಂಟಾಗುವ ವಿವಿಧ ಕಸಗಳನ್ನು ಹೇಳುವರು.<br>• ತನ್ನ ಮನೆಯ ಕಸವನ್ನು ಹೇಗೆ ವಿಲೇವಾರಿಮಾಡುತ್ತಾರೆ ಎಂಬುದನ್ನು ಹೇಳುವರು.<br>• ಚಿತ್ರಗಳ ಮೂಲಕ ಕಸದ ವಿಲೇವಾರಿ ಮಾಡುವ ಸರಿಯಾದ ಕ್ರಮವನ್ನು ಆಯ್ಕೆ ಮಾಡುವರು. | ➢ **ಶಾಲೆಯಲ್ಲಿ ಉಂಟಾಗುವ ವಿವಿಧ ಕಸಗಳನ್ನು ಗುರುತಿಸುವರು. ಇದರ ಸರಿಯಾದ ವಿಲೇವಾರಿ ಕ್ರಮವನ್ನು ಅರಿಯುವರು ಮತ್ತು ಅನುಸರಿಸುವರು.**<br>• ಶಾಲೆಯಲ್ಲಿ ಉಂಟಾಗುವ ವಿವಿಧ ಕಸಗಳನ್ನು ಗುರುತಿಸುವರು.<br>• ಆ ಕಸವನ್ನು ವಿವಿಧ ಗುಂಪುಗಳಾಗಿ ವರ್ಗೀಕರಿಸಿ ಕಾರಣಗಳನ್ನು ತಿಳಿಸುವರು.<br>• ಶಾಲೆಯಲ್ಲಿ ಉಂಟಾದ ಕಸವನ್ನು ಹೇಗೆ ವಿಲೇವಾರಿ ಮಾಡುವರು ಎಂಬುದನ್ನು ವಿವರಿಸುವರು.<br>• ಸರಿಯಾದ ವಿಲೇವಾರಿ ಕ್ರಮವನ್ನು ಬರೆಯುವರು. | ➢ **ಗ್ರಾಮೀಣ ಮತ್ತು ನಗರದ ತ್ಯಾಜ್ಯಗಳನ್ನು ವರ್ಗೀಕರಿಸುವರು. ತ್ಯಾಜ್ಯಗಳ ಸರಿಯಾದ ವಿಲೇವಾರಿ ಕ್ರಮಗಳನ್ನು ಅರಿಯುವರು. ಕಸದ ನಿಯಂತ್ರಣದ ಅಭ್ಯಾಸಗಳನ್ನು**<br>• ಗ್ರಾಮಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಉಂಟಾಗುವ ವಿವಿಧ ರೀತಿಯ ಕಸಗಳನ್ನು/ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡುವರು.<br>• ವ್ಯತ್ಯಾಸವನ್ನು ಗುರುತಿಸಿ ಕಾರಣಗಳನ್ನು ತಿಳಿಸುವರು.<br>• ಗುಣಲಕ್ಷಣದ ಆಧಾರದ ಮೇಲೆ ತ್ಯಾಜ್ಯಗಳನ್ನು ವರ್ಗೀಕರಿಸುವರು.<br>• ಪ್ರತಿ ವಿಧದ ತ್ಯಾಜ್ಯವನ್ನು ವಿಲೇವಾರಿ ಮಾಡುವ ಕ್ರಮವನ್ನು ಬರೆಯುವರು. |

| | | | |
|---|---|---|---|
| | | | • ಕಸವನ್ನು ಕಡಿಮೆ ಮಾಡುವ ವಿಧಾನವನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸುವರು.<br><br>• ಕಸದಿಂದ ಮಾಡಬಹುದಾದ ಒಂದು ಸೃಜನಶೀಲ ಚಟುವಟಿಕೆ ಪ್ರದರ್ಶಿಸುವರು. |
| | ➢ **ಮನೆಯ ಅವಶ್ಯಕತೆ ಗುರುತಿಸುವರು. ಒಟ್ಟಾಗಿ ಬಾಳುವ ಅಗತ್ಯ ತಿಳಿಯುವರು.**<br><br>• ನಮಗೆ ಮನೆ ಏಕೆ ಬೇಕು ಎಂದು ವಿವರಿಸುವರು. | ➢ **ವಿವಿಧ ಸಂಸ್ಕೃತಿಗಳಿಗನುಗುಣವಾಗಿ ಮನೆಯ ಅಲಂಕಾರದ ವಿಧಾನಗಳನ್ನು ತಿಳಿಯುವರು**<br><br>• ತಮ್ಮ ಮನೆಯನ್ನು ಹಬ್ಬದಂದು ಹೇಗೆ ಅಲಂಕರಿಸುವರು ಎಂಬುವುದರ ಬಗ್ಗೆ ಟಿಪ್ಪಣಿ ಬರೆಯುವರು.<br><br>• ಗುಂಪು ಚರ್ಚೆಯ ಮೂಲಕ ಮನೆಗಳನ್ನು ವಿವಿಧ ರೀತಿಯಲ್ಲಿ ಹೇಗೆ ಅಲಂಕರಿಸುತ್ತಾರೆ ಎಂಬುದನ್ನು ವಿವರಿಸುವರು. | ➢ **ನಗರಗಳಲ್ಲಿರುವ ಬಹುಮಹಡಿ ಕಟ್ಟಡ ಮತ್ತು ಕೊಳಚೆ ಪ್ರದೇಶಗಳ ಬಗ್ಗೆ ತಿಳಿಯುವರು.**<br><br>• ಚಿತ್ರಗಳ ಸಹಾಯದಿಂದ ನಗರಗಳಲ್ಲಿರುವ ಬಹುಮಹಡಿ ಕಟ್ಟಡ ಮತ್ತು ಕೊಳಚೆ ಪ್ರದೇಶಗಳನ್ನು ವಿವರಿಸುವರು. |
| | | ➢ **ಉತ್ತಮ ಮನೆಯ ಲಕ್ಷಣಗಳನ್ನು ಗುರುತಿಸುವರು.(ಸ್ವಚ್ಛತೆ)**<br><br>• ಉತ್ತಮ ಮನೆಯ ಲಕ್ಷಣಗಳನ್ನು ಗುರುತಿಸಿ, ತಮ್ಮ ಮನೆಯ ಲಕ್ಷಣದೊಂದಿಗೆ ಹೋಲಿಸುವರು. | |

| | | | | |
|---|---|---|---|---|
| | | | | **➢ ಪ್ರಾಣಿಗಳ ಆವಾಸಸ್ಥಾನ ಮತ್ತು ವಸತಿಗಳ ವೈವಿಧ್ಯತೆ ಮತ್ತು ಅವುಗಳ ಉದ್ದೇಶವನ್ನು ಪತ್ತೆಮಾಡುವರು.**<br>• ತಮಗೆ ಗೊತ್ತಿರುವ 5 ಪ್ರಾಣಿಗಳ (ಸಾಕು ಮತ್ತು ಕಾಡುಪ್ರಾಣಿ) ವಾಸಸ್ಥಳ ಗುರುತಿಸಿ ವಿವರಿಸುವರು.<br>**➢ ಪಕ್ಷಿ ಮತ್ತು ಗೂಡುಗಳ ರಚನೆ ಅದಕ್ಕೆ ಬಳಸುವ ಸಾಮಗ್ರಿಗಳಲ್ಲಿನ ವೈವಿಧ್ಯತೆಯನ್ನು ಗುರುತಿಸುವರು.**<br>• ತಮಗೆ ಗೊತ್ತಿರುವ ಮೂರು ಪಕ್ಷಿಗಳ ವಾಸಸ್ಥಳಗಳನ್ನು ಹೆಸರಿಸುವರು.<br>• ಸಾಮಾನ್ಯವಾಗಿ ಪಕ್ಷಿಗಳು ಗೂಡುಕಟ್ಟಲು ಬಳಸುವ ವಸ್ತುಗಳ ಹೆಸರುಗಳನ್ನು ಬರೆಯುವರು. |
| | **ವಿಷಯ : ಸಾರಿಗೆ ಮತ್ತು ಸಂಪರ್ಕ** | | | |
| | **➢ ಸ್ಥಳೀಯ ಸಾರಿಗೆಯ ವಿವಿಧ ಬಗೆಗಳನ್ನು ಗುರುತಿಸುವರು.**<br>• ತಾನು ನೋಡಿರುವ ಸಾರಿಗೆಗಳನ್ನು ಹೇಳುವರು. | **➢ ಸಾರಿಗೆ ಸಾಧನಗಳನ್ನು ವೇಗದ ಸಾಹನ ಮತ್ತು ನಿಧಾನದ ವಾಹನಗಳೆಂದು ಹೋಲಿಸಿ ವರ್ಗೀಕರಿಸುವರು.**<br>• ಚಿತ್ರಗಳ ಸಹಾಯದಿಂದ ಸಾರಿಗೆ ಸಾಧನಗಳನ್ನು ವೇಗದ ವಾಹನ ಮತ್ತು ನಿಧಾನದ ವಾಹನಗಳೆಂದು ವರ್ಗೀಕರಿಸುವರು. | **➢ ಸನಿಹ, ದೂರದ ಮತ್ತು ನೂತನ ಬಗೆಯ ಸಂಚಾರ ಸಾಧನಗಳನ್ನು ಅರಿಯುವರು.**<br>• ಸಂದರ್ಭಗಳ ವಿವರಗಳನ್ನು ಆಧರಿಸಿ ಯಾವ ವಾಹನಗಳನ್ನು ಬಳಸಿದರೆ ಉತ್ತಮ ಎಂಬುದನ್ನು ನಿರ್ಧರಿಸಿ ಹೆಸರಿಸುವರು. | **➢ ಸಾರಿಗೆಯಲ್ಲಿ ಪ್ರಾಣಿಗಳ ಬಳಕೆಯನ್ನು ಗುರುತಿಸುವರು.**<br>• ತನ್ನ ಊರಿನಲ್ಲಿ ಪ್ರಾಣಿಗಳನ್ನು ಬಳಸುವ ಸಾರಿಗೆಯನ್ನು ಹೆಸರಿಸುವರು. |

| | | | | |
|---|---|---|---|---|
| 10. ಸಾರಿಗೆ ಮತ್ತು ಸಂಪರ್ಕ (ಪ್ರಯಾಣ) | • ತಾನು ಬಳಸುವ ಸಾರಿಗೆಗಳನ್ನು ಹೇಳುವರು (ಚಿತ್ರಗಳ ಸಹಾಯದಿಂದ) | | | ➢ ಪ್ರಾಣಿಗಳ ಬಗ್ಗೆ ಸಂವೇದನಾ ಶೀಲರಾಗಿ ವರ್ತಿಸುವರು.<br>• ಸಾರಿಗೆಯಲ್ಲಿ ಬಳಸುವ ಪ್ರಾಣಿಗಳನ್ನು ನೋಡಿಕೊಳ್ಳುವ ಬಗೆಯನ್ನು ವಿವರಿಸುವರು. ಅದರಲ್ಲಿ ತನಗೆ ತಪ್ಪೆಂದು ಅನಿಸುವ |
| | | ➢ **ಭೂ, ಜಲ ಮತ್ತು ವಾಯು ಸಾರಿಗೆಗಳನ್ನು ಗುರುತಿಸುವರು.**<br>• ಚಿತ್ರಗಳ ಸಹಾಯದಿಂದ ಭೂ, ಜಲ ಮತ್ತು ವಾಯು ಸಾರಿಗೆಗಳೆಂದು ಗುರುತಿಸುವರು. | | |
| | | | ➢ **ಪ್ರಯಾಣದ ಅವಶ್ಯಕತೆಯನ್ನು ಗುರುತಿಸುವರು.**<br>• ಪ್ರಯಾಣದ ಉದ್ದೇಶಗಳನ್ನು ಹೇಳುವರು<br>• ತಾನು ಯಾವ ಕಾರಣಗಳಿಂದ ಪ್ರಯಾಣ ಮಾಡಿದೆ ಎಂದು ಬರೆಯುವರು. | |
| | | | ➢ **ಸಾರಿಗೆ ನಿಲ್ದಾಣಗಳಲ್ಲಿ ಕಾರ್ಯ ನಿರ್ವಹಿಸುವ ವಿವಿಧ ಕೆಲಸಗಾರರ ಬಗ್ಗೆ ಅರಿಯುವರು.** | |

| | | | | |
|---|---|---|---|---|
| | | | • ಗುಂಪು ಚಟುವಟಿಕೆಗಳ ಮೂಲಕ ಬಸ್ ನಿಲ್ದಾಣ/ರೇಲ್ವೆ ನಿಲ್ದಾಣಗಳಲ್ಲಿ ಕಾರ್ಯ ನಿರ್ವಹಿಸುವ ವಿವಿಧ ಕೆಲಸಗಾರರು ಮಾಡುವ | |
| | | | ➢ **ಸಂಜ್ಞೆ, ನೃತ್ಯ ಮುಂತಾದವುಗಳ ಮೂಲಕ ಭಾಷೆ ಬಳಸದೇ ಮಾತನಾಡುವರು.**<br><br>• ಸಂಜ್ಞೆ, ಅಭಿನಯಗಳ ಮೂಲಕ ತನ್ನ ಸ್ನೇಹಿತರಿಗೆ ಸಂದೇಶ ನೀಡುವರು. | |
| | | | ➢ **ಪತ್ರದ ಮೂಲಕ ಸಂಪರ್ಕಮಾಡುವ ವಿಧಾನ ಹಾಗೂ ಅಂಚೆ ಕಚೇರಿಯ ಕಾರ್ಯ ಚಟುವಟಿಕೆಗಳನ್ನು ತಿಳಿಯುವರು.**<br><br>• ತನ್ನ ಸ್ನೇಹಿತರಿಗೆ ಒಂದು ಘಟನೆಯನ್ನು ಪತ್ರದ ಮೂಲಕ ತಿಳಿಸುವರು (ಪತ್ರ ಲೇಖನ)<br><br>• ಕೊಟ್ಟಿರುವ ಚಿತ್ರಗಳನ್ನು ವೀಕ್ಷಿಸಿ, ಅನುಕ್ರಮವಾಗಿ ಜೋಡಿಸಿ, ಅಂಚೆ ಕಚೇರಿಯ ಕಾರ್ಯಚಟುವಟಿಕೆಗಳನ್ನು ತಿಳಿಸುವರು.<br><br>• ಅಂಚೆ ಕಚೇರಿಯ ಕಾರ್ಯ ಚಟುವಟಿಕೆಗಳನ್ನು ಅಭಿನಯದ ಮೂಲಕ ತಿಳಿಸುವರು. | ➢ **ಕಾಲದಿಂದ ಕಾಲಕ್ಕೆ ಬದಲಾದ ವಿವಿಧ ರೀತಿಯ ಸಂಪರ್ಕ ಸಾಧನಗಳನ್ನು ಗುರುತಿಸುವರು.**<br><br>• ಚಿತ್ರಗಳ ಸಹಾಯದಿಂದ ಕಾಲಾನುಕ್ರಮದಲ್ಲಿ ಬೆಳೆದುಬಂದ ಸಂಪರ್ಕ ಸಾಧನಗಳನ್ನು ಜೋಡಿಸುವರು.<br><br>• ತಾನು ಉಪಯೋಗಿಸುತ್ತಿರುವ ಸಂಪರ್ಕ ಸಾಧನಗಳನ್ನು ವಿವರಿಸುವರು. |
| **ವಿಷಯ : ನಮ್ಮ ಇತರ ಅವಶ್ಯಕತೆಗಳು** | | | | |

| | | | | |
|---|---|---|---|---|
| 11. ನಮ್ಮ ಇತರ ಅವಶ್ಯಕತೆಗಳು | ➢ **ಮೂಲಭೂತ ಅಗತ್ಯತೆಗಳನ್ನು ಪಟ್ಟಿಮಾಡುವರು.**<br><br>• ತಾನು ಬದುಕಲು ಏನೇನು ಬೇಕು ಎಂಬುದನ್ನು ಹೇಳುವರು. | ➢ **ಮಕ್ಕಳು ತಮ್ಮ ಅವಶ್ಯಕ ಸೇವೆಗಳ ಬಗ್ಗೆ ಅರಿಯುವರು.**<br><br>• ತನಗೆ ಬೇಕಾದ ಅವಶ್ಯಕ ಸೇವೆಗಳನ್ನು ಹೇಳುವರು.<br><br>• ಕೊಟ್ಟಿರುವ ಚಿತ್ರ ಪಟ್ಟಿಯಲ್ಲಿ ತನಗೆ ಬೇಕಾದ ಅವಶ್ಯಕ ಸೇವೆಗಳನ್ನು ಗುರುತಿಸುವರು.<br><br>➢ **ಮಕ್ಕಳು ತಮಗೆ ಬೇಕಾದ ಅವಶ್ಯಕ ವಸ್ತುಗಳನ್ನು ಗುರುತಿಸುವರು.**<br><br>• ತಮಗೆ ಬೇಕಾದ ಅವಶ್ಯಕ ವಸ್ತುಗಳನ್ನು ಹೇಳುವರು.<br><br>• ಈ ವಸ್ತುಗಳನ್ನು ಯಾರು ತಯಾರಿಸುವರು ಎಂದು ಹೇಳುವರು. | ➢ **ಮೂಲಭೂತ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ವಿವಿಧ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದ ಎಂಬುದನ್ನು ಮಡಿಕೆ ಮತ್ತು ಚಕ್ರದ ಉದಾಹರಣೆಯ**<br><br>• ಮಡಿಕೆ ಮಾಡುವ ವಿಧಾನವನ್ನು ಬರೆಯುವರು.<br><br>• ಅವಶ್ಯಕತೆಗಳ ಪಟ್ಟಿಯೊಂದಿಗೆ ಅದನ್ನು ಪೂರೈಸುವ ಸಾಧನಗಳೊಂದಿಗೆ ಹೊಂದಿಸುವರು.<br><br>➢ **ಜೇಡಿಮಣ್ಣಿನಿಂದ ಮಡಿಕೆಯ ಮಾದರಿಗಳನ್ನು ತಯಾರಿಸುವರು.**<br><br>• ಜೇಡಿ ಮಣ್ಣಿನಿಂದ ಮಡಿಕೆ ಮಾದರಿ ತಯಾರಿಸಿ, ಪ್ರದರ್ಶಿಸುವರು.<br><br>➢ **ಹಿಂದಿನ ದಿನಗಳಲ್ಲಿ ಅನುಸರಿಸುತ್ತಿದ್ದ ಧಾನ್ಯ ಸಂಗ್ರಹಣೆ ವಿಧಾನದಲ್ಲಿ ಕಾಲಕ್ರಮೇಣ ಅವುಗಳಲ್ಲಾದ ಬದಲಾವಣೆಗಳ ಬಗ್ಗೆ ಚರ್ಚಿಸುವರು. (ಸ್ಥಳೀಯವಾಗಿ ಧಾನ್ಯ**<br><br>• ತಮ್ಮ ಊರಿನಲ್ಲಿ ಧಾನ್ಯ ಸಂಗ್ರಹಿಸುವ ಕ್ರಮವನ್ನು ವಿವರಿಸುವರು.<br><br>• ಹಿರಿಯರಿಂದ ತಿಳಿದ ವಿವರವನ್ನು ಈಗಿನ ಸಂಗ್ರಹಣಾ ವಿಧಾನಕ್ಕೆ ಹೋಲಿಸಿ, ಬದಲಾವಣೆಗಳನ್ನು ಗುರುತಿಸುವರು. | ➢ **ಸ್ವಾಭಾವಿಕ ಸಂಪನ್ಮೂಲಗಳ ಮತ್ತು ಸೃಜನ ಶೀಲತೆಯ ಮಾನವ ಬದುಕನ್ನು ಹೇಗೆ ಬದಲಾಯಿಸಿದೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸುವರು**<br><br>• ಅವಶ್ಯಕತೆಗಳ ಪಟ್ಟಿ ತಯಾರಿಸಿ, ಪ್ರತಿಯೊಂದು ಅವಶ್ಯಕತೆಗೂ ಅಗತ್ಯವಾದ ಸ್ವಾಭಾವಿಕ ಸಂಪನ್ಮೂಲಗಳನ್ನು ಗುರುತಿಸಿ ಬರೆಯುವರು.<br><br>➢ **ಉಡುಪುಗಳಲ್ಲಿರುವ ವೈವಿಧ್ಯತೆ, ಬಟ್ಟೆ ತಯಾರಿಕೆಯಲ್ಲಿ ಬಳಸುವ ಬಣ್ಣ ಮತ್ತು ವಿನ್ಯಾಸದ ಬಗ್ಗೆ ಚರ್ಚಿಸುವರು.**<br><br>• ಉಡುಪಿನ ಉದಾಹರಣೆಯೊಂದಿಗೆ ಮಾನವನ ಸೃಜನಶೀಲತೆಯನ್ನು ವಿವರಿಸುವರು.(ಹತ್ತಿಯಿಂದ ಉಡುಪು ತಯಾರಿಕೆ, ಉಡುಪಿನ ವೈವಿಧ್ಯ)<br><br>➢ **ಬಟ್ಟೆ ತುಂಡುಗಳನ್ನು ಸಂಗ್ರಹಿಸಿ ಉಡುಪಿನ ಮಾದರಿಗಳನ್ನು ತಯಾರಿಸುವರು.**<br><br>• ಸಂಗ್ರಹಿಸಿದ ಬಟ್ಟೆ ತುಂಡುಗಳಿಂದ ಉಡುಪಿನ ಮಾದರಿಗಳನ್ನು ತಯಾರಿಸುವರು.<br><br>➢ **ವಿವಿಧ ಜಿಲ್ಲೆಗಳಲ್ಲಿ ಬಳಸುವ ವಿವಿಧ ಉಡುಪುಗಳ ಬಗ್ಗೆ ತಿಳಿಯುವರು.**<br><br>• ಚಿತ್ರಗಳ ಸಹಾಯದಿಂದ ವಿವಿಧ ಜಿಲ್ಲೆಗಳಲ್ಲಿ ಬಳಸುವ ಬಟ್ಟೆಗಳ ವಿವಿಧ ಮಾದರಿಗಳನ್ನು ಗುರುತಿಸುವರು.(ಕೆಲವು ಉದಾಹರಣೆಗಳೊಂದಿಗೆ) |

| ವಿಷಯ : ಸ್ವಚ್ಛತೆ | | | | |
|---|---|---|---|---|
| | **➢ದೇಹದ ಭಾಗಗಳನ್ನು ಗುರುತಿಸುವರು.**<br><br>• ತನ್ನ ದೇಹದ ಭಾಗಗಳನ್ನು ತೋರಿಸಿ ಹೆಸರಿಸುವರು. | **➢ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು.**<br><br>• ತನ್ನ ದೇಹದ ಅಂಗಗಳನ್ನು ಹೆಸರಿಸಿ ಅವುಗಳ ಕಾರ್ಯಗಳನ್ನು ಹೇಳುವರು | **➢ದೇಹದ ಭಾಗಗಳಾದ ಜ್ಞಾನೇಂದ್ರಿಯಗಳನ್ನು ಗುರುತಿಸುವರು ಮತ್ತು ಅವುಗಳ ಕಾರ್ಯಗಳನ್ನು ತಿಳಿಯುವರು.**<br><br>• ತನ್ನ ದೇಹದಲ್ಲಿ ಜ್ಞಾನೇಂದ್ರಿಯಗಳನ್ನು ಗುರುತಿಸಿ ಹೆಸರಿಸುವರು.<br><br>• ಅವುಗಳ ಕಾರ್ಯಗಳನ್ನು ಬರೆಯುವರು. | **➢ದೇಹದಲ್ಲಿ ನಡೆಯುವ ಮುಖ್ಯಕ್ರಿಯೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಮುಖ್ಯ ಅಂಗಗಳ ಪರಿಚಯ ಮಾಡಿಕೊಳ್ಳುವುದು.**<br><br>• ದೇಹದಲ್ಲಿ ನಡೆಯುವ ಮುಖ್ಯ ಕ್ರಿಯೆಗಳನ್ನು ಬರೆಯುವರು.<br><br>• ಚಿತ್ರಗಳ ಸಹಾಯದಿಂದ ಕ್ರಿಯೆಗಳಿಗೆ ಸಂಬಂಧಪಟ್ಟ ಮುಖ್ಯ ಅಂಗಗಳನ್ನು ಪರಿಚಯಿಸುವರು. |
| | **➢ದೇಹದ ಅಂಗಗಳ ಸ್ವಚ್ಛತೆಯ ಪ್ರಾಮುಖ್ಯತೆ ಮತ್ತು ಸ್ವಚ್ಛತೆಯ ಅಭ್ಯಾಸಗಳನ್ನು ಅರಿಯುವರು.**<br><br>• ದೇಹದ ಭಾಗಗಳಿಗೆ ಸಂಬಂಧಿಸಿದಂತೆ ತಾನು ಅನುಸರಿಸುತ್ತಿರುವ ಸ್ವಚ್ಛತೆಯ ಅಭ್ಯಾಸಗಳನ್ನು ಹೇಳುವರು. | **➢ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಸ್ವಚ್ಛತೆಯ ಅವಶ್ಯಕತೆಯನ್ನು ಅರಿಯುವರು.**<br><br>• ದೇಹದ ಭಾಗಗಳ ಸ್ವಚ್ಛತೆಗೆ ತಾನು ಅನುಸರಿಸುತ್ತಿರುವ ಅಭ್ಯಾಸಗಳನ್ನು ಹೇಳಿ, ಕಾರಣಗಳನ್ನು ಕೊಡುವರು. | **➢ಜ್ಞಾನೇಂದ್ರಿಯಗಳ ಸ್ವಚ್ಛತೆಯ ಮತ್ತು ರಕ್ಷಣೆಯ ವಿಧಾನಗಳನ್ನು ಅರಿಯುವರು.**<br><br>• ಪ್ರತಿಯೊಂದು ಜ್ಞಾನೇಂದ್ರಿಯವನ್ನು ಹೇಗೆ ಸ್ವಚ್ಛವಾಗಿಟ್ಟುಕೊಳ್ಳುವೆ? ಎಂಬುದನ್ನು ವಿವರಿಸುವರು.<br><br>**➢ಹಲ್ಲು, ಹಲ್ಲುಗಳ ವಿಧಗಳು ಮತ್ತು ಕಾರ್ಯಗಳನ್ನು ತಿಳಿಯುವರು.** | **➢ಕಲುಷಿತ ಆಹಾರ, ನಿರು, ಗಾಳಿಯಿಂದ ಮತ್ತು ಕೆಲವು ಕೀಟಗಳಿಂದ ರೋಗಗಳು ಹರಡುತ್ತವೆ ಎಂಬುದನ್ನು ಅರಿಯುವರು ಮತ್ತು ಆರೋಗ್ಯಕರ ಅಭ್ಯಾಸಗಳಿಂದ**<br><br>• ಕಲುಷಿತ ಆಹಾರ, ನಿರು, ಗಾಳಿಯಿಂದ ಮತ್ತು ಕೆಲವು ಕೀಟಗಳಿಂದ ಹರಡುವ ಮುಖ್ಯ ರೋಗಗಳನ್ನು ಗುರುತಿಸುವರು.<br><br>• ಈ ರೋಗಗಳನ್ನು ತಡೆಗಟ್ಟಲು ಉತ್ತಮ ಆರೋಗ್ಯದ ಅಭ್ಯಾಸಗಳನ್ನು ಅರಿಯುವರು. |

| | | | | |
|---|---|---|---|---|
| 12. ಸ್ವಚ್ಛತೆ | | | • ಹಲ್ಲುಗಳ ವಿಧಗಳನ್ನು ತೋರಿಸಿ ಹೇಳುವರು ಮತ್ತು ಪ್ರತಿಯೊಂದು ಹಲ್ಲಿನ ವಿಧದ ಕಾರ್ಯಗಳನ್ನು ಹೇಳುವರು.<br><br>➢ **ಹಲ್ಲುಗಳ ಸ್ವಚ್ಛತೆಯ ಅಭ್ಯಾಸವನ್ನು ರೂಢಿಸಿ ಕೊಳ್ಳುವುದು.**<br><br>• ಹಲ್ಲಿನ ಸ್ವಚ್ಛತೆಗಾಗಿ ತಾನು ರೂಢಿಸಿಕೊಂಡ ವಿಧಾನಗಳನ್ನು ಬರೆಯುವರು. | • ಉತ್ತಮ ಆರೋಗ್ಯಕರ ಅಭ್ಯಾಸಗಳನ್ನು ಪಟ್ಟಿಮಾಡಿ, ತಾನು ಅನುಸರಿಸುತ್ತಿರುವ ಕ್ರಮಗಳಿಗೆ ಗುರುತು ಹಾಕುವರು. |

| | | | | |
|---|---|---|---|---|
| | | | | |
| | ➢ **ಅವಶ್ಯಕತೆಗಳನ್ನು ಪೂರೈಸುವ ಸೌಲಭ್ಯಗಳನ್ನು ಗುರುತಿಸುವರು.**<br>• ಚಿತ್ರಗಳ ಸಹಾಯದಿಂದ ತಮಗೆ ಅಗತ್ಯವಿರುವ ಸೌಲಭ್ಯಗಳನ್ನು ಗುರುತಿಸುವರು. | ➢ **ಸಾರ್ವಜನಿಕ ಆಸ್ತಿಗಳನ್ನು ಗುರುತಿಸುವರು. ಅಗತ್ಯ ಪೂರೈಕೆಯ ಬಗ್ಗೆ ಹಿರಿಯರಿಂದ ಕೇಳಿ ತಿಳಿಯುವರು.**<br>• ಚಿತ್ರದ ಮೂಲಕ ಸಾರ್ವಜನಿಕ ಸೌಲಭ್ಯಗಳನ್ನು ಗುರುತಿಸುವರು. | ➢ **ಸಾರ್ವಜನಿಕ ಸೌಲಭ್ಯಗಳ ಅಗತ್ಯವನ್ನು ಗುರುತಿಸುವರು. ಸಾರ್ವಜನಿಕ ಸೌಲಭ್ಯಗಳ ರಕ್ಷಣೆ ಮಾಡುವರು.**<br>• ಸಾರ್ವಜನಿಕ ಸೌಲಭ್ಯಗಳನ್ನು ಗುರುತಿಸುವರು.<br>• ಇವು ನಮಗೆ ಏಕೆ ಬೇಕು? ಎಂಬುದಕ್ಕೆ ಕಾರಣಗಳನ್ನು ನೀಡುವರು.<br>• ಸೌಲಭ್ಯಗಳು ಹಾಳಾದರೆ ನಮಗಾಗುವ ತೊಂದರೆಗಳನ್ನು ವಿಶ್ಲೇಷಿಸುವರು. | |
| **ವಿಷಯ : ಸೌಲಭ್ಯಗಳು ಮತ್ತು ಸುರಕ್ಷತೆ** | | | | |
| | ➢ **ಸರತಿ ಕಾಯುವರು.** | ➢ **ಸ್ಥಳೀಯ ಪರಿಸರದಲ್ಲಿ ವೈಯಕ್ತಿಕ ಸುರಕ್ಷತೆಯ ಅಭ್ಯಾಸಗಳನ್ನು ಹಾಗೂ ಸುರಕ್ಷತೆಯಗೆ ಸರಳ ಕ್ರಮಗಳನ್ನು ಕೈಗೊಳ್ಳುವರು.** | ➢ **ಮನೆ ಮತ್ತು ಹೊರಗಿನ ಅಪಘಾತದ ಸನ್ನಿವೇಶಗಳನ್ನು ಗುರುತಿಸುವರು.** | ➢ **ಸಂಚಾರಿ ಸಂಕೇತಗಳು, ಸುರಕ್ಷತೆಯ ನಿಯಮಗಳು ಮತ್ತು ಅವುಗಳನ್ನು ಅನುಸರಿಸುವ ಅವಶ್ಯಕತೆಯನ್ನು ತಿಳಿಯುವರು.** |

| | | | | |
|---|---|---|---|---|
| 13. ಕೌಶಲ್ಯಗಳು ಮತ್ತು ಸುರಕ್ಷೆ | • ಸಾಲಿನಲ್ಲಿ ನಿಲ್ಲುವ ಅಭ್ಯಾಸ ಕಲಿಯುವರು.<br><br>ಗುಂಪು ಚಟುವಟಿಕೆಯ ಮೂಲಕ ಸಾಲಿನಲ್ಲಿ ನಿಂತು ಸರತಿ ಕಾಯುವುದನ್ನು ಪ್ರದರ್ಶಿಸುವರು. | • ಚಿತ್ರಗಳ ಮೂಲಕ ವಿವಿಧ ಅಪಘಾತದ ಸನ್ನಿವೇಶಗಳನ್ನು ಗುರುತಿಸುವರು. ಹೇಗೆ ಆಯಿತು ಎಂಬುದಕ್ಕೆ ಕಾರಣ ನೀಡುವರು.<br><br>• ಇದನ್ನು ತಡೆಗಟ್ಟ ಬಹುದಾದ ವಿಧಾನಗಳನ್ನು ಹೇಳುವರು.<br><br>• ತಮಗಾದ ಅಪಘಾತದ ಅನುಭವಗಳನ್ನು ಹಂಚಿಕೊಳ್ಳುವರು (ಬಿದ್ದು ಗಾಯವಾದಾಗ, ಬ್ಲೇಡ್, ಚೂಪಾದ ವಸ್ತುಗಳಿಂದಾದ ಗಾಯ) ಅದರಿಂದ ಅವರು ಕಲಿತ ಅಂಶಗಳನ್ನು | • ಮನೆಯಲ್ಲಿ ಮತ್ತು ಮನೆಯ ಹೊರಗೆ ಉಂಟಾಗುವ ಅಪಘಾತಗಳನ್ನು (ಕನಿಷ್ಟ 5) ಪಟ್ಟಿಮಾಡುವರು.<br><br>• ತಮಗೆ ತಿಳಿದ ಯಾವುದಾರೂ ಒಂದು ಅಪಘಾತದ ಸನ್ನಿವೇಶವನ್ನು ವಿವರಿಸುವರು.<br><br>• ಇದನ್ನು ಹೇಗೆ ತಡೆಯಬಹುದಾಗಿತ್ತು ಎಂಬುದನ್ನು ಚರ್ಚೆಯ ಮೂಲಕ ವ್ಯಕ್ತಪಡಿಸುವರು. | • ಸಂಚಾರಿ ನಿಯಮಗಳನ್ನು ಬರೆಯುವರು.<br><br>• ಸಂಚಾರಿ ಸಂಕೇತಗಳ ಚಿತ್ರಗಳನ್ನು ಬರೆದು ಅದು ಏನನ್ನು ಸೂಚಿಸುತ್ತದೆ ಎಂಬುದನ್ನು ಬರೆಯುವರು.<br><br>• ಸುರಕ್ಷತೆಯ ನಿಯಮಗಳ ಚಾರ್ಟ ತಯಾರಿಸುವರು.<br><br>• ಟ್ರಾಫಿಲ್ ಪೋಲೀಸ್ ಪಾತ್ರಾಭಿನಯ ಮಾಡುವರು.<br><br>• ಸುರಕ್ಷತೆಯ ನಿಯಮಗಳ ಚಾರ್ಟ ಉಪಯೋಗಿಸಿ, ಅವುಗಳನ್ನು ಅನುಸರಿಸುವ ಅವಶ್ಯಕತೆಗಳನ್ನು ಇತರರ ಮುಂದೆ ಮಂಡಿಸುವರು.<br><br>➢ **ಗೋಳದ ಮೇಲೆ ಮುಖ್ಯ ಅಕ್ಷಾಂಶ ರೇಖಾಂಶಗಳನ್ನು ಗುರುತಿಸುವರು.**<br><br>• ಮುಖ್ಯ ಅಕ್ಷಾಂಶ ರೇಖಾಂಶಗಳನ್ನು ಗುರುತಿಸಿ ಹೆಸರಿಸುವರು. |

**ವಿಷಯ : ನಮ್ಮ ಭೂಮಿ**

| | | | | |
|---|---|---|---|---|
| | **➢ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಗುರುತಿಸುವರು.**<br>• ಚಿತ್ರಗಳಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಗುರುತಿಸುವರು. | **➢ ಸೂರ್ಯ, ಚಂದ್ರ, ನಕ್ಷತ್ರಗಳನ್ನು ವೀಕ್ಷಿಸಿ ಕಣ್ಣಿಗೆ ಕಾಣುವ ಇವುಗಳ ಲಕ್ಷಣಗಳನ್ನು ಗುರುತಿಸುವರು.**<br>• ಸೂರ್ಯ, ಚಂದ್ರ, ನಕ್ಷತ್ರಗಳ ಕಣ್ಣಿಗೆ ಕಾಣುವ ಲಕ್ಷಣಗಳನ್ನು ಹೇಳುವರು. | **➢ ಭೂಮಿಯ ಆಕಾರವನ್ನು ತಿಳಿಯುವರು.**<br>• ಭೂಮಿಯ ಆಕಾರವನ್ನು ತನಗೆ ಗೊತ್ತಿರುವ ವಸ್ತುಗಳಿಗೆ ಹೋಲಿಸಿ, ವಿವರಿಸುವರು.<br>**➢ ಗೋಳದ ಮೇಲೆ ಖಂಡ ಮತ್ತು ಸಾಗರಗಳನ್ನು ಗುರುತಿಸುವರು.**<br>• ಗೋಳದ ಮೇಲೆ ಖಂಡ ಮತ್ತು ಸಾಗರಗಳನ್ನು ಗುರುತಿಸಿ ಹೆಸರಿಸುವರು. | **➢ ಭೂಮಿಯು ಎಲ್ಲರ ವಸತಿ. ಇಲ್ಲಿ ಜೀವಿಸಲು ಬೇಕಾದ ಗಾಳಿ, ಮಣ್ಣು, ನೀರು ಇದೆ ಎಂದು ಮೆಚ್ಚುವರು.**<br>• ಗಾಳಿ ಮತ್ತು ಮಣ್ಣಿನ ಪ್ರಾಮುಖ್ಯತೆಯನ್ನು ಗುರುತಿಸುವರು.<br>• ಭೂಮಿಯ ಮೇಲೆ ಜೀವಿಗಳು ವಾಸಿಸಲು ಬೇಕಾದ ಅಂಶಗಳನ್ನು ಬರೆಯುವರು.<br>• ಪ್ರತಿಯೊಂದು ಅಂಶಗಳ ಪ್ರಾಮುಖ್ಯತೆಯನ್ನು ವಿವರಿಸುವರು. |
| | | | **➢ ದಿನದಲ್ಲಿ ಆಗುವ ಬದಲಾವಣೆಗಳನ್ನು 'ಮೋಡ ಕವಿದ', 'ಬಿಸಿಲಿನಿಂದ ಕೂಡಿದ' ಪದಗಳನ್ನು ಬಳಸಿ ವಿವರಿಸುವುದು.**<br>• ದಿನದಲ್ಲಿ ಆಗುವ ಹವಾಮಾನದ ಬದಲಾವಣೆಗಳನ್ನು ಚಿತ್ರದ ಮೂಲಕ ವ್ಯಕ್ತಪಡಿಸುವರು. | **➢ ಬೇರೆ ಬೇರೆ ಕಾಲಗಳಲ್ಲಿನ ಬದಲಾವಣೆಗಳನ್ನು ಗುರುತಿಸುವರು.**<br>• ಬೇರೆ ಬೇರೆ ಕಾಲಗಳ ಹವಾಮಾನವನ್ನು ಚಿತ್ರಗಳ ಮೂಲಕ ಗುರುತಿಸುವರು.<br>• ಅಲ್ಲಿನ ಬದಲಾವಣೆಗಳನ್ನು ಬರೆಯುವರು.<br>• ಕಾಲಕ್ಕೆ ಅನುಗುಣವಾಗಿ ತಾನು ಧರಿಸುವ ಉಡುಪು, ಬಳಸುವ ವಸ್ತುಗಳನ್ನು ಪಟ್ಟಿ ಮಾಡುವರು. |

| | | | | |
|---|---|---|---|---|
| | | | ➢ **ಸೂರ್ಯೋದಯದ ಸಹಾಯದಿಂದ ದಿಕ್ಕುಗಳನ್ನು ಗುರುತಿಸುವರು.**<br>• ಸೂರ್ಯನಿಗೆ ಎದುರಾಗಿ ನಿಂತು ದಿಕ್ಕುಗಳನ್ನು ಗುರುತಿಸುವರು. | ➢ **ಭಾರತದ ನಕ್ಷೆಯಲ್ಲಿ ಕರ್ನಾಟಕವನ್ನು ಗುರುತಿಸುವರು.**<br>• ಭಾರತದ ನಕ್ಷೆಯಲ್ಲಿ ದಿಕ್ಕುಗಳನ್ನು ಗುರುತಿಸುವರು.<br>• ಭಾರತದ ನಕ್ಷೆಯಲ್ಲಿ ಕರ್ನಾಟಕವನ್ನು ಗುರುತಿಸುವರು |
| 4. ನಮ್ಮ ಭೂಮಿ | ➢ **ಸ್ಥಳೀಯ ಪರಿಸರದ ಬಗ್ಗೆ ಮಾಹಿತಿ ಪಡೆಯುವರು.**<br>• ತಮ್ಮ ಮನೆಯ/ಶಾಲೆಯ ಸುತ್ತಮುತ್ತಲಲ್ಲಿ ಏನೇನು ಇವೆ? ಎಂಬುದನ್ನು ಗುರುತಿಸುವರು. | ➢ **ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವರು.**<br>• ತನ್ನ ಊರಿನ ಸುತ್ತಲಿನ ಬೆಟ್ಟ, ನದಿ, ಬಯಲು, ಕೆರೆ ಇತ್ಯಾದಿ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವರು. | ➢ **ನೈಸರ್ಗಿಕ ಮತ್ತು ಮಾನವನಿಂದ ಬದಲಾದ ಪರಿಸರದ ಲಕ್ಷಣಗಳನ್ನು ಗುರುತಿಸುವರು ಮತ್ತು ನೈಸರ್ಗಿಕ ಪರಿಸರದ ಸಂರಕ್ಷಣೆಯ ಮಹತ್ವವನ್ನು ಮನಗಾಣುವರು**<br>• ನೈಸರ್ಗಿಕ ಪರಿಸರವನ್ನು 2 ಉದಾಹರಣೆಗಳೊಂದಿಗೆ ವಿವರಿಸುವರು.<br>• ಮಾನವನಿಂದ ಬದಲಾದ ಪರಿಸರಕ್ಕೆ 2 ಉದಾಹರಣೆ ಕೊಡುವರು.<br>• ನೈಸರ್ಗಿಕ ಪರಿಸರವನ್ನು ಮಾನವರು ಏಕೆ ಬದಲಾಯಿಸಿ ಕೊಂಡಿದ್ದಾರೆ ಎಂಬುದಕ್ಕೆ ಕಾರಣಗಳನ್ನು ನೀಡುವರು.<br>• ನೈಸರ್ಗಿಕ ಪರಿಸರ ಸಂರಕ್ಷಣೆಯ ಅವಶ್ಯಕತೆಯನ್ನು ಪ್ರತಿಪಾದಿಸುವರು. | |

| | | | | |
|---|---|---|---|---|
| | | | | |
| | | ➢ **ತಮ್ಮ ಹೋಬಳಿ ಮತ್ತು ತಾಲೂಕುಗಳನ್ನು ಗುರುತಿಸುವರು.**<br><br>• ತನ್ನ ಜಿಲ್ಲೆಯ ನಕ್ಷೆಯಲ್ಲಿ, ತನ್ನ ಹೋಬಳಿ ಮತ್ತು ತಾಲೂಕುಗಳನ್ನು ಗುರುತಿಸುವರು. | ➢ **ಜಿಲ್ಲೆಯ ಪರಿಚಯ ಮಾಡಿಕೊಳ್ಳುವರು.**<br><br>• ಕರ್ನಾಟಕದ ನಕ್ಷೆಯಲ್ಲಿ ತಮ್ಮ ಜಿಲ್ಲೆಯನ್ನು ಗುರುತಿಸುವರು.<br><br>• ತಮ್ಮ ಜಿಲ್ಲೆಯ ನೆರೆಹೊರೆಯ ಜಿಲ್ಲೆಗಳನ್ನು ಗುರುತಿಸಿ ಹೇಳುವರು.<br><br>• ಜಿಲ್ಲೆಯ ಪರಿಚಯ ಮಾಡಿಕೊಡುವರು(ಭೌಗೋಳಿಕ ಲಕ್ಷಣ, ಧಾನ್ಯಗಳು, ಬೆಳೆಗಳು, ಪ್ರಸಿದ್ಧ ಸ್ಥಳ, ಪ್ರಸಿದ್ಧ ನಕ್ಷೆ ಇತ್ಯಾದಿ) | ➢ **ಕರ್ನಾಟಕ ರಾಜ್ಯದ ಪರಿಚಯ ಮಾಡಿಕೊಳ್ಳುವರು.**<br><br>• ಕರ್ನಾಟಕ ರಾಜ್ಯದ ಭೂಪಟದಲ್ಲಿ ನೆರೆಹೊರೆಯ ರಾಜ್ಯಗಳನ್ನು ಗುರುತಿಸುವರು.<br><br>• ರಾಜ್ಯದ ಭೌಗೋಳಿಕ ಲಕ್ಷಣಗಳು ಪ್ರಮುಖ ಬೆಳೆಗಳು, ಸಸ್ಯವರ್ಗ ಮತ್ತು ವಿಶೇಷತೆಗಳನ್ನು ಹೇಳುವರು.<br><br>➢ **ರಾಜ್ಯದ ಐತಿಹಾಸಿಕ ಪ್ರಸಿದ್ಧ ನಿಸರ್ಗದ ಸ್ಥಳಗಳನ್ನು ಗುರುತಿಸುವರು. ಅವುಗಳ ಮಹತ್ವ ತಿಳಿದು ಸಂರಕ್ಷಿಸುವ ಮನೋಭಾವ ಬೆಳೆಸಿಕೊಳ್ಳುವರು.**<br>• ಕರ್ನಾಟಕ ರಾಜ್ಯದ 5 ಐತಿಹಾಸಿಕ ಸ್ಥಳಗಳನ್ನು, 5 ನಿಸರ್ಗಧಾಮಗಳನ್ನು ಹೆಸರಿಸಿ, ಅವು ಏಕೆ ಪ್ರಸಿದ್ಧ ಎಂಬುದನ್ನು ವಿವರಿಸುವರು.<br><br>• ರಾಜ್ಯದ ಪ್ರಸಿದ್ಧ ಐತಿಹಾಸಿಕ ಮತ್ತು ನಿಸರ್ಗ ಸ್ಥಳಗಳ ಸ್ಥಿತಿ ಏನಾಗುತ್ತಿದೆ ಎಂಬುದನ್ನು ಚಿತ್ರಗಳ ಸಹಾಯದಿಂದ ವಿಶ್ಲೇಷಿಸುವರು. |

| | | | | | |
|---|---|---|---|---|---|
| | | | | | • ಇವುಗಳನ್ನು ಸಂರಕ್ಷಿಸಬೇಕು ಎಂಬುವುದರ ಬಗ್ಗೆ ಕಾರಣ ಸಹಿತ, ವಾದ ಮಂಡಿಸುವರು.<br><br>• ಕೊಟ್ಟಿರುವ ಸನ್ನಿವೇಶಗಳಲ್ಲಿ ತಾನು ಇದ್ದರೆ ಏನುಮಾಡುವೆ? ಎಂಬುದನ್ನು ವ್ಯಕ್ತಪಡಿಸುವರು. ಉದಾ : ನಿಸರ್ಗ ಧಾಮದಲ್ಲಿ ಚೆಲ್ಲಾ ಪಿಲ್ಲಿಯಾಗಿ<br><br>➢ **ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸಮಾಜ ಸುಧಾರಕರು ರಾಜ್ಯಕ್ಕೆ ನೀಡಿದ ಕೊಡುಗೆಗಳನ್ನು ಹಾಗೂ ರಾಜ್ಯದ ಸುಪ್ರಸಿದ್ಧ ವ್ಯಕ್ತಿಗಳ ಪರಿಚಯ ಮಾಡಿಕೊಳ್ಳುವರು**<br>• ರಾಜ್ಯಕ್ಕೆ ಕೊಡುಗೆ ನೀಡಿದ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರು ಮತ್ತು ಇಬ್ಬರು ಸಮಾಜ ಸುಧಾರಕರ ಬಗ್ಗೆ ಭಾಷಣ ಮಾಡುವರು<br>• ರಾಜ್ಯದ ಸುಪ್ರಸಿದ್ಧ ವ್ಯಕ್ತಿಗಳಂತೆ ವೇಷ ಧರಿಸಿ, ಪರಿಚಯ ಮಾಡಿಕೊಡುವರು.<br><br>• ಗ್ರಂಥಾಲಯ ಪುಸ್ತಕದ ನೆರವಿನಿಂದ ಒಬ್ಬ ಸ್ವಾತಂತ್ರ್ಯ ಹೋರಾಟಗಾರ/ಸಮಾಜ ಸುಧಾರಕ/ಸುಪ್ರಸಿದ್ಧ ವ್ಯಕ್ತಿಯ ಜೀವನ ಮತ್ತು ಸಾಧನೆಗಳನ್ನು ವಿವರಿಸುವರು |